بِسْمِ اللّٰهِ الرَّحْمٰنِ الرَّحِيْمِ    نَحْمَدُهٗ وَنُصَلِّي عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 06

ಸಂಚಿಕೆ: 22

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

29 ಮೇ 2025, 29 ಹಿಜ್ರತ್ 1404 ಹಿಜರಿ ಶಮ್‌ಸಿ,
01 ಝುಲ್‌ಹಜ್ಜ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَعَدَ اللّٰهُ الَّذِيْنَ اٰمَنُوْا مِنْكُمْ وَعَمِلُوا
الصّٰلِحٰتِ لَيَسْتَخْلِفَنَّهُمْ فِي الْاَرْضِ
كَمَا اسْتَخْلَفَ الَّذِيْنَ مِنْ قَبْلِهِمْ

**(ಅನ್ನೂರ್: 56)**

**ಅಂದರೆ: ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮ ಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಸಮಯಾಧಾರಿತ ಸಂಪತ್ತು ಖರ್ಚು ಮಾಡುವವರ ಮತ್ತು ಇತರರಿಗೆ ಜ್ಞಾನ ಕಲಿಸುವವರ ಶ್ರೇಷ್ಠತೆ.

**(1409)** ಹಝ್‌ರತ್ ಇಬ್ನು ಮಸ್‌ಉದ್(ರ) ವರದಿ ಮಾಡುತ್ತಾರೆ. ಅವರು ಹೇಳಿದರು. ನಬಿ(ಸ) ಅವರಿಂದ ಆಲಿಸಿರುತ್ತೇನೆ. ಅವರು ನುಡಿದರು. ಅಸೂಯೆ ಪಡಬಾರದು. ಆದರೆ ಇಬ್ಬರ (ಮನುಷ್ಯರ) ಮೇಲೆ ಮಾತ್ರ. ಒಂದು, ವ್ಯಕ್ತಿಯೊಬ್ಬನಿಗೆ ಅಲ್ಲಾಹನು ಸಂಪತ್ತು ನೀಡಿರಬೇಕು ಮತ್ತು ಅದನ್ನು ಸಾಂಧರ್ಭಿಕವಾಗಿ ಖರ್ಚು ಮಾಡುವ ಭಾಗ್ಯ ಪಡೆದಿರಬೇಕು. ಮತ್ತು ಆ ವ್ಯಕ್ತಿ ಅವನಿಗೆ ಅಲ್ಲಾಹನು ಸರಿಯಾದ ಜ್ಞಾನ ನೀಡಿರಬೇಕು ಅವನು ಅದರ ಮೇಲೆ ಸ್ವಯಂ ಪಾಲಿಸುವವನಾಗಬೇಕು. ಮತ್ತು ಜನರಿಗೆ ಸಹ ಕಲಿಸಬೇಕು.

### ಸದ್‌ಖಾ ಝಕಾತ್ (ದಾನ) ಪರಿಶುದ್ಧ ಸಂಪತ್ತಿನಿಂದ ನೀಡಬೇಕು.

**(1410)** ಹಝ್‌ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್ (ಸ) ನುಡಿದರು. ಯಾವ ವ್ಯಕ್ತಿ ತನ್ನ ಪರಿಶುದ್ಧ ಸಂಪತ್ತಿನಿಂದ ಒಂದು ಖರ್ಜೂರದಷ್ಟು ಸದ್‌ಖಾ ನೀಡುವನೋ ಅಲ್ಲಾಹನು ಪರಿಶುದ್ಧ ವಸ್ತುವೇ ಸ್ವೀಕರಿಸುವನು, ಅಲ್ಲಾಹನು ಆ ಸದ್‌ಖಾವನ್ನು ತನ್ನ ಬಲಗೈಯಿಂದ ಸ್ವೀಕರಿಸುವನು ಮತ್ತು ಸದ್‌ಖಾ ನೀಡುವವನಿಗೆ ಇನ್ನಷ್ಟು ಅನುಗ್ರಹಿಸುತ್ತಾನೆ. ಯಾವ ರೀತಿ ಒಬ್ಬನು ತನ್ನ ಹಸುವನ್ನು ಸಾಕಿರುತ್ತಾನೆ. ಆ ಸದ್‌ಖಾ ಪರ್ವತ ಸಮಾನವಾಗುತ್ತದೆ. **(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಝ್ಝುಕಾತ್, ಮುದ್ರಣ 2008 ಖಾದಿಯಾನ್)**

ಅಲ್ಲಾಹನು ಕಳುಹಿಸಿದ ಸುಧಾಕರನ್ನು ಮತ್ತು ಅವನ ಸ್ನೇಹಿತರನ್ನು ವಿರೋದಿಸುವವರಿಗೆ ಮತ್ತು ಪೀಡನೆ ನೀಡುವವರಿಗೆ ಪರಿಣಾಮ ನೆಟ್ಟಗಿರುವುದಿಲ್ಲ.
ಯಾವ ವ್ಯಕ್ತಿ ಅವರಿಗೆ ಪೀಡನೆ ನೀಡಿ ಮತ್ತು ದುಃಖ ಕೊಟ್ಟು ನಾನು ಆರಾಮವಾಗಿರಬಹುದೆಂದು ಯೋಚಿಸುವನೋ ಅವನು ಕಠಿಣವಾದ ತಪ್ಪು ಹಾದಿಯಲ್ಲಿರುವನು ಮತ್ತು ಆತ್ಮವಂಚನೆ ಮಾಡಿಕೊಳ್ಳುವವನಾಗುತ್ತಾನೆ.

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಇದು ಕಾಯಿದೆಯ ಮಾತಾಗಿದೆ, ವ್ಯಕ್ತಿಯೊಬ್ಬನು ಒಬ್ಬನನ್ನು ಪ್ರೀತಿಸುವವನಾದರೆ, ತನ್ನ ಮಕ್ಕಳಂತೆ ಪ್ರೀತಿಸುವವನಾದರೆ, ಅವನಿಗೆ ನೀನು ಸಾಯಿ ಅಥವಾ ಅದೇ ರೀತಿಯ ಮನನೋಯಿಸುವ ಮಾತುಗಳನ್ನಾಡಿದರೆ, ಆ ವ್ಯಕ್ತಿ ಹೇಗೆ ತಾನೆ ಸಂತೋಷಪಡುವನು. ಯಾವನ ತಂದೆ ತನ್ನ ಪುತ್ರನಿಗಾಗಿ ಶಾಪ ಹಾಕುತ್ತಿರುವನು ಮತ್ತು ದು:ಖ ನೀಡುವ ರೀತಿಯ ಮಾತನ್ನಾಡುವನು, ಇಂತಹ ವ್ಯಕ್ತಿಯೊಂದಿಗೆ ಹೇಗೆ ಪ್ರೀತಿ ಮಾಡಲು ಸಾಧ್ಯ? ಅದೇ ರೀತಿಯಲ್ಲಿ ಅಲ್ಲಾಹನ ಸ್ನೇಹಿತರು ಸಹ, ಅಲ್ಲಾಹನ ಮಕ್ಕಳ ರೀತಿಯ ಪ್ರೀತಿ ಹೊಂದುವರು. ಏಕೆಂದರೆ ಅವರು ದೇವೇಚ್ಛೆಯ ವಸ್ತ್ರಗಳನ್ನು ಕಳಚಿ ಅಲ್ಲಾಹನ ಮಡಿಲಿಗೆ ಸೇರಿದವರಾಗುತ್ತಾರೆ. ಅಲ್ಲಾಹನೇ ಅವನ ಪೋಷಕ ಹಾಗೂ ರಕ್ಷಕನಾಗಿರುತ್ತಾನೆ. ಅವನು ಅವರಿಗಾಗಿ ಸ್ವಾಭಿಮಾನ ಹೊಂದುವವನಾಗಿರುತ್ತಾನೆ. ಯಾವನೇ ವ್ಯಕ್ತಿ (ಅವನು ಎಂತಹ ನಮಾಝ್ ಅನುಷ್ಠಿಸುವವನಾಗಲಿ, ಉಪವಾಸ ಮಾಡುವವನಾಗಲಿ) ಅವರನ್ನು ವಿರೋಧಿಸುವವರಾಗಿದ್ದರೆ ಮತ್ತು ಪೀಡನೆಗೆ ಸಿದ್ಧನಾದರೆ ಅಲ್ಲಾಹನ ಸ್ವಾಭಿಮಾನ ಜಾಗೃತಗೊಳ್ಳುತ್ತದೆ ಮತ್ತು ವಿರೋಧಿಸುವವರ ಮೇಲೆ ಅವರ ಪ್ರಕೋಪ ಉಂಟಾಗುತ್ತದೆ. ಏಕೆಂದರೆ ಅವರು ಅವನ ಸ್ತ್ರೀಯರನ್ನು ದು:ಖ ಕೊಡಬಯಸಿದ್ದಾರೆ. ಆ ಸಮಯ ಅವರಿಗೆ ನಮಾಝ್ ಸಹ ಅವರ ಸಹಾಯಕ್ಕೆ ಬಾರದು. ಉಪವಾಸವು ಸಹಾಯಕ್ಕೆ ಬಾರದು. ಏಕೆಂದರೆ ನಮಾಝ್ ಮತ್ತು ಉಪವಾಸ ಅವನಿಗೆ ರಾಜಿ ಮಾಡುವ ಉದ್ದೇಶದಿಂದಿತ್ತು. ಅದನ್ನು ಬೇರೆ ಉದ್ದೇಶದಿಂದ ಅಸಂತುಷ್ಟ ಪಡಿಸಿದಂತಾಯಿತು. ಹಾಗಾಗಿ ಹೇಗೆ ತಾನೇ ಅವರಿಗೆ ಅವನ ಸಂಪ್ರೀತಿ ದೊರೆಯಲು ಸಾಧ್ಯ. ಮೂರ್ಖನಾದ ಅವರು ಅವನ ಪ್ರಕೋಪದಿಂದ ಅಜ್ಞಾನಿಯಾಗಿರುತ್ತಾರೆ. ನಮಾಝ್, ಉಪವಾಸದ ಮೇಲೆ ಗರ್ವಪಡುವವರಾಗಿರುತ್ತಾರೆ. ಪರಿಣಾಮವಾಗಿ ದಿನೇ ದಿನೇ ಅಲ್ಲಾಹನ ಪ್ರಕೋಪ ಹೆಚ್ಚುತ್ತಲೇ ಹೋಗುತ್ತದೆ. ಹಾಗಾಗಿ ಅವರು ಅವನ ಸಂತೃಪ್ತಿ ಪಡೆಯುವ ಬದಲಿಗೆ ಅಲ್ಲಾಹನಿಂದ ದೂರವಾಗುತ್ತಾರೆ. ಅವನಿಂದ ಧಿಕ್ಕರಿಸಲ್ಪಡುತ್ತಾರೆ. ಅದೇ ರೀತಿ ಯಾವ ವ್ಯಕ್ತಿ ಅಲ್ಲಾಹನ ಸಂಪ್ರೀತಿಯಲ್ಲಿ ತನ್ನನ್ನು ಕಳಕೊಂಡಿರುತ್ತಾನೆ. ಮತ್ತು ಅವನ ಮಡಿಲಲ್ಲಿ ಘೋಷಿಸಲ್ಪಡುತ್ತಾನೆ. ಅವನ ಅನುಗ್ರಹಕ್ಕೆ ಒಳಪಟ್ಟಿರುತ್ತಾನೆ. ಅವನು ಮಾತನಾಡುವುದು ದೇವನು ಮತನಾಡಿಸಿದಂತೆ, ಅವನ ಮಿತ್ರ ದೇವನ ಮಿತ್ರನಾಗುತ್ತಾನೆ, ಅವನ ಶತ್ರು ದೇವನ ಶತ್ರುವಾಗುತ್ತಾನೆ. ಅಂದ ಹಾಗೆ ದೇವನ ಶತ್ರು ಆದ ವ್ಯಕ್ತಿಯೊಬ್ಬನು ಹೇಗೆ ಸತ್ಯವಿಶ್ವಾಸಿಯಾಗಿರಲು ಸಾಧ್ಯ. ಹೀಗೆ ಅವನ ವಿಶ್ವಾಸ ಹರಣವಾಗುತ್ತದೆ. ಮತ್ತು ಅವನ ಪ್ರಕೋಪಕ್ಕೆ ಗುರಿಯಾಗುತ್ತಾನೆ. ಅಲ್ಲಾಹನು ಕಳುಹಿಸಿದ ಸುಧಾರಕರನ್ನು ಮತ್ತು ಅಲ್ಲಾಹನ ಸ್ನೇಹಿತರನ್ನು ವಿರೋಧಿಸುವವರು, ಪೀಡಿಸುವವರು ಎಂದೂ ಒಳ್ಳೆಯ ಫಲ ಪಡೆಯುವುದಿಲ್ಲ. ಯಾವ ವ್ಯಕ್ತಿ ಅವರನ್ನು ಪೀಡಿಸಿ ಮತ್ತು ದುಃಖ ನೀಡಿ ನಾನು ಆರಾಮವಾಗಿರಬಹುದು ಎಂದು ಭಾವಿಸುವವನು ತಪ್ಪು ಕಲ್ಪನೆಯಲ್ಲಿರುವನು ಮತ್ತು ತನ್ನ ಆತ್ಮಕ್ಕೆ ವಂಚಿಸುವವನಾಗುತ್ತಾನೆ. **(ಮಲ್ಫೂಝಾತ್ ಸಂಪುಟ 1, ಪುಟ 314 ಮುದ್ರಣ 2018 ಖಾದಿಯಾನ್)**

## 130ನೇ ಜಲ್ಸಾ ಸಾಲಾನ ಖಾದಿಯಾನ್ 26, 27, 28 ಡಿಸೆಂಬರ್ 2025ರಂದು ಆಯೋಜಿಸಲಾಗುವುದು

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 130ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 26, 27 ಮತ್ತು 28ನೇ ಡಿಸೆಂಬರ್ 2025 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.** **(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಮರ್ಕಝಿಯ ಖಾದಿಯಾನ್)**

# ಖುತ್‌ಬ ಜುಮುಅ

ಪವಿತ್ರ ಖುರ್‌ಆನಿಗೆ ರಮಝಾನಿನೊಂದಿಗೆ ಇರುವ ವಿಶೇಷ ಸಂಬಂಧವನ್ನು ಅಲ್ಲಾಹನು ಹೇಳಿದ್ದಾನೆ. ಒಂದು ವಿಶೇಷ ಸಂಬಂಧವನ್ನು ತಿಳಿಸಿದ್ದಾನೆ. ಆದ್ದರಿಂದ, ಈ ತಿಂಗಳಲ್ಲಿ ಅದನ್ನು ಓದುವುದರತ್ತ ವಿಶೇಷವಾಗಿ ನಮ್ಮ ಗಮನವನ್ನು ಸೆಳೆಯಲಾಗಿದೆ.

“ಇದರ ವರದಾನಗಳ ಮತ್ತು ಅನುಗ್ರಹಗಳ ಬಾಗಿಲು ಯಾವಾಗಲೂ ತೆರೆದಿತ್ತು. ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಇದ್ದಂತೆ ಇದು ಪ್ರತಿ ಕಾಲದಲ್ಲಿಯೂ ಪ್ರಕಾಶಮಾನವಾಗಿದೆ.” (ಹಝ್ರತ್ ಮಸೀಹ್ ಮೌಊದ್(ಅ))

ಅಹ್ಮದಿಯರಾದ ನಾವಂತೂ ಹೆಸರಿಗೆ ಮಾತ್ರ ಮುಸ್ಲಿಮರಾಗಲೇ ಬಾರದು. ಏಕೆಂದರೆ ನಾವು ಈ ಕಾಲಘಟ್ಟದಲ್ಲಿ ಮಸೀಹ್ ಮೌಊದ್ ಮತ್ತು ಮೆಹದಿ ಮೌಊದ್‌ರನ್ನು ನಂಬಿದ್ದೇವೆ, ಅಲ್ಲಾಹನ ಸಾಮೀಪ್ಯವನ್ನು ಪಡೆಯಲಿಕ್ಕಾಗಿ ನಾವು ನಂಬಿಕೆ ಇರಿಸಿದ್ದೇವೆ. ಅಲ್ಲಾಹನ ಭವಿಷ್ಯವಾಣಿಯ ಪ್ರಕಾರ ಆಗಮಿಸಿದ ವ್ಯಕ್ತಿಯನ್ನು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ಅದನ್ನು ಪೂರೈಸಲು ನಂಬಿದ್ದೇವೆ. ನಾವು ನಂಬಿಕೆ ಇರಿಸಿಕೊಂಡಿರುವ ಕಾರಣದಿಂದ ನಾವು ಪವಿತ್ರ ಖುರ್‌ಆನಿನ ಆದೇಶಗಳನ್ನು ಪಾಲಿಸುವವರೂ ಆಗಬೇಕು. ಹಾಗಲ್ಲವಾದರೆ, ನಾವು ಬೈಅತ್ ಮಾಡಿದ್ದೇವೆ ಎಂದು ವಾದಿಸುವುದರಿಂದ ಯಾವುದೇ ಪ್ರಯೋಜನವಿಲ್ಲ.

“ಪವಿತ್ರ ಖುರ್‌ಆನನ್ನು ಬಿಟ್ಟುಕೊಂಡು, ತ್ಯಜಿಸಿಕೊಂಡು ಯಶಸ್ಸು ಅಸಾಧ್ಯ ಮತ್ತು ಅಸಂಭವನೀಯ. ಅದಿಲ್ಲದೇ ಜನರು ಹುಡುಕುತ್ತಿರುವ ಯಶಸ್ಸು ಕೇವಲ ಕಾಲ್ಪನಿಕವಾಗಿದೆ.” (ಹಝ್ರತ್ ಮಸೀಹ್ ಮೌಊದ್(ಅ))

"ಪವಿತ್ರ ಖುರ್‌ಆನನ್ನು ಓದಿ ಅದರಂತೆ ನಡೆಯುವ ಸತ್ಯವಿಶ್ವಾಸಿಯ ಉದಾಹರಣೆ, ಉತ್ತಮವಾದ ರುಚಿ ಮತ್ತು ಪರಿಮಳ ಎರಡೂ ಇರುವ ಹಣ್ಣಿನಂತೆ ಆಗಿದೆ. ಪವಿತ್ರ ಖುರ್‌ಆನನ್ನು ಓದದಿದ್ದರೂ ಅದನ್ನು ಪಾಲಿಸುವ ಸತ್ಯವಿಶ್ವಾಸಿಯ ಉದಾಹರಣೆ, ಎಂದರೆ ಇಲ್ಲಿಂದ ಅಲ್ಲಿಂದ ಮಾತುಗಳನ್ನು ಆಲಿಸಿ ಅದರಂತೆ ನಡೆಯುವ ಸತ್ಯವಿಶ್ವಾಸಿಯ ಉದಾಹರಣೆ, ಖರ್ಜೂರದ ಹಣ್ಣಿನಂತೆ ಆಗಿದೆ. ಅದರ ರುಚಿ ಉತ್ತಮವಾಗಿದೆ. ಆದರೆ ಅದಕ್ಕೆ ಯಾವುದೇ ಪರಿಮಳವಿಲ್ಲ. ಪವಿತ್ರ ಖುರ್‌ಆನನ್ನು ಓದುವ ಕಪಟವಿಶ್ವಾಸಿಯ ಉದಾಹರಣೆ, ಪರಿಮಳಯುಕ್ತ ಗಿಡದಂತೆ ಆಗಿದೆ. ಅದರ ಪರಿಮಳವು ಚೆನ್ನಾಗಿದೆ ಆದರೆ ರುಚಿ ಕಹಿಯಾಗಿದೆ. ಪವಿತ್ರ ಖುರ್‌ಆನನ್ನು ಓದದ ಕಪಟವಿಶ್ವಾಸಿಯ ಉದಾಹರಣೆ, ಪರಿಮಳ ಮತ್ತು ರುಚಿ ಎರಡೂ ಇಲ್ಲದ ಕಹಿ ಹಣ್ಣಿನಂತೆ ಆಗಿದೆ. (ಪ್ರವಾದಿ ಮುಹಮ್ಮದ್(ಸ))

"ಪವಿತ್ರ ಖುರ್‌ಆನಿನ ಪ್ರಕಾರ ನಡೆಯುವವರು ಮಾತ್ರ ಯಶಸ್ವಿಯಾಗುತ್ತಾರೆ. ಪವಿತ್ರ ಖುರ್‌ಆನನ್ನು ತ್ಯಜಿಸಿ, ಅದನ್ನು ಬಿಟ್ಟುಕೊಂಡು ಯಶಸ್ಸು ಅಸಾಧ್ಯ ಮತ್ತು ಕಷ್ಟಕರವಾಗಿದೆ." (ಹಝ್ರತ್ ಮಸೀಹ್ ಮೌಊದ್(ಅ))

ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಪವಿತ್ರ ಖುರ್‌ಆನ್ ನಿಷೇಧಿಸಿದ್ದನ್ನು ಅನುಮತನೀಯವೆಂದು ಪರಿಗಣಿಸುವವನಿಗೆ ಪವಿತ್ರ ಖುರ್‌ಆನ್ ಮೇಲೆ ಯಾವುದೇ ನಂಬಿಕೆಯಿಲ್ಲ.

ಪವಿತ್ರ ಖುರ್‌ಆನನ್ನು ಬಹಿರಂಗವಾಗಿ ಓದುವವನು ಬಹಿರಂಗವಾಗಿ ಸದಖ (ದಾನ) ಮಾಡುವವನಂತೆ ಆಗಿರುತ್ತಾನೆ ಮತ್ತು ಪವಿತ್ರ ಖುರ್‌ಆನನ್ನು ರಹಸ್ಯವಾಗಿ ಓದುವವನು ರಹಸ್ಯವಾಗಿ ದಾನ ಮಾಡುವವನಂತೆ ಆಗಿದ್ದಾನೆ.

ಮನುಷ್ಯನು ಪವಿತ್ರ ಖುರ್‌ಆನನ್ನು ಬಹಳಷ್ಟು ಓದಬೇಕು, ಅದರಲ್ಲಿ ದುಆದ ಭಾಗ ಬಂದರೆ, ದುಆ ಮಾಡಬೇಕು. ಸುಂದರವಾಗಿ ಓದಬೇಕು ಎಂಬುದರ ಒಂದು ಅರ್ಥವೇನೆಂದರೆ, ಪ್ರಾರ್ಥನೆಯ ಜಾಗ ಬರುವಾಗ ಪ್ರಾರ್ಥಿಸಬೇಕು..... ಪವಿತ್ರ ಖುರ್‌ಆನಿನಲ್ಲಿ ಅನೇಕ ಪ್ರಾರ್ಥನೆಗಳಿವೆ, ಪ್ರವಾದಿಗಳು ಸಹ ದುಆ ಮಾಡಿದ್ದಾರೆ, ಆದ್ದರಿಂದ ನನಗೆ ಅದನ್ನು ನೀಡು ಎಂದು ಮಾನವನು ಸ್ವತಃ ಅಲ್ಲಾಹನೊಡನೆ ಹೇಳಬೇಕು. ಶಿಕ್ಷೆಯ ಪ್ರಸ್ತಾಪ ಬರುವಾಗ ಅದರಿಂದ ರಕ್ಷಣೆಯನ್ನು ಕೋರಬೇಕು. ಜನಾಂಗಗಳ ನಾಶಕ್ಕೆ ಕಾರಣವಾದ ಕೆಟ್ಟ ಕಾರ್ಯಗಳಿಂದ ದೂರವಿರಬೇಕು.

**ಪವಿತ್ರ ಮಾಸ ರಮಝಾನ್‌ನ ಬಗ್ಗೆ ಪವಿತ್ರ ಖುರ್‌ಆನ್, ಪ್ರವಾದಿ(ಸ)ರ ಹದೀಸ್‌ಗಳು ಹಾಗೂ ಹಝ್ರ‌ತ್ ಮಸೀಹ್ ಮೌಊದ್(ಅ)ರ ಅಧ್ಯಾಪನೆಗಳ ಬೆಳಕಿನಲ್ಲಿ ಪವಿತ್ರ ಖುರ್‌ಆನ್‌ನ ಪ್ರಾಮುಖ್ಯತೆ, ಮಹತ್ವ ಹಾಗೂ ಅನುಗ್ರಹಗಳ ವಿಶ್ವಾಸ ವರ್ಧಕ ಪ್ರಸ್ತಾವನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **‘ಮಸ್ಜಿದ್ ಮುಬಾರಕ್’** ನಿಂದ **14–03–2025** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್ಲಾಹನ ಅನುಗ್ರಹದಿಂದ ನಾವು ರಮಝಾನಿನ ಎರಡನೇ ಹತ್ತು ದಿನಗಳಿಂದ ಸಾಗುತ್ತಿದ್ದೇವೆ. ಪವಿತ್ರ ಖುರ್‌ಆನಿಗೆ ರಮಝಾನಿನೊಂದಿಗೆ ಇರುವ ವಿಶೇಷ ಸಂಬಂಧವನ್ನು ಅಲ್ಲಾಹನು ಹೇಳಿದ್ದಾನೆ. ಒಂದು ವಿಶೇಷ ಸಂಬಂಧವನ್ನು ತಿಳಿಸಿದ್ದಾನೆ. ಅವನ ಹೀಗೆ ಹೇಳಿದ್ದಾನೆ, "**ಶಹ್ರು ರಮಝಾನುಲ್ಲಝೀ ಉನ್ಝಿಲ ಫೀಹಿಲ್ ಖುರ್‌ಆನ್ ಹುದನ್ ಲಿನ್ನಾಸ್ ವ ಬಯ್ಯಿನಾತುಮ್ ಮಿನಲ್ ಹುದಾ ವಲ್ ಫುರ್ಖಾನ್**". ಎಂದರೆ ಮಾನವಕುಲಕ್ಕೆ ಸನ್ಮಾರ್ಗದರ್ಶನ ನೀಡುವ, ಮಾರ್ಗದರ್ಶಿ ಹಾಗೂ ಸತ್ಯ ಮತ್ತು ಅಸತ್ಯದ ವ್ಯತ್ಯಾಸವನ್ನುಂಟುಮಾಡುವ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್.

ಆದ್ದರಿಂದ, ಈ ತಿಂಗಳಲ್ಲಿ ಅದನ್ನು ಓದುವುದರತ್ತ ವಿಶೇಷವಾಗಿ ನಮ್ಮ ಗಮನವನ್ನು ಸೆಳೆಯಲಾಗಿದೆ. ಹಝ್ರತ್ ಪೈಗಂಬರ್(ಸ)ರ

ದಾಸ್ಯದಲ್ಲಿ, ಅವರ ಅನುಯಾಯಿಯಾಗಿ ಅಲ್ಲಾಹನು ಈ ಕಾಲಘಟ್ಟದಲ್ಲಿ, ಇಮಾಮಾಗಿ ಕಳುಹಿಸಿದ ಹಝ್ರತ್ ಮಸೀಹ್ ಮೌಊದ್(ಅ) ಸಹ ಈ ಕುರಿತು ಗಮನ ಸೆಳೆದಿದ್ದಾರೆ. ಪವಿತ್ರ ಖುರ್‌ಆನನ್ನು ವಿಶೇಷ ಕಾಳಜಿಯೊಂದಿಗೆ ಓದಲು ಹಝ್ರತ್ ಪೈಗಂಬರ್(ಸ) ವಿಶೇಷವಾಗಿ ಒತ್ತು ನೀಡಿದ್ದಾರೆ. ಪವಿತ್ರ ಖುರ್‌ಆನಿನ ಅವತೀರ್ಣವಾದಷ್ಟು ಭಾಗವನ್ನು ಹಝ್ರತ್ ಜಿಬ್ರೀಲ್(ಅ) ಹಝ್ರತ್ ಪೈಗಂಬರ್(ಸ)ರೊಂದಿಗೆ ಪ್ರತಿ ವರ್ಷ ಓದಿ ಪೂರ್ಣಗೊಳಿಸುತ್ತಿದ್ದರು ಮತ್ತು ಅವರ ಜೀವನದ ಕೊನೆಯ ವರ್ಷದಲ್ಲಿ, ಅವರು ಎರಡು ಬಾರಿ ಪೂರ್ಣಗೊಳಿಸಿದರು. ಆದ್ದರಿಂದ ರಮಝಾನ್‌ನೊಂದಿಗೆ ಪವಿತ್ರ ಖುರ್‌ಆನಿಗೆ ಬಹಳ ಹೆಚ್ಚಿನ ಪ್ರಾಮುಖ್ಯತೆ ಮತ್ತು ಸಂಬಂಧವಿದೆ. ಆದ್ದರಿಂದ, ಈ ವಿಷಯವನ್ನು ಯಾವಾಗಲೂ ನೆನಪಿನಲ್ಲಿಡಬೇಕು ಮತ್ತು ಪವಿತ್ರ ಖುರ್‌ಆನನ್ನು ಓದುವುದು, ಆಲಿಸುವುದು ಮತ್ತು ದರ್ಸ್‌ಗಳಲ್ಲಿ ಭಾಗವಹಿಸುವುದರತ್ತ ಗಮನಹರಿಸಬೇಕು. ನಮ್ಮ ಮಸೀದಿಗಳಲ್ಲಿ ಪವಿತ್ರ ಖುರ್‌ಆನಿನ ದರ್ಸ್‌ಗಳನ್ನು ನಡೆಸಲಾಗುತ್ತದೆ ಮತ್ತು ತರಾವೀಹ್ ಸಹ ನಡೆಯುತ್ತದೆ. (ಸಹೀಹ್ ಬುಖಾರಿ ಕಿತಾಬ್ ಫಝಾಎಲುಲ್ ಖುರ್‌ಆನ್......., ಹದೀಸ್–4997)

ಪವಿತ್ರ ಖುರ್‌ಆನ್ ಪಾರಾಯಣ ಮಾಡಬೇಕೆಂದು ಒತ್ತಿಹೇಳಲಾಗುತ್ತದೆ. ಎಮ್‌ಟಿಎಯಲ್ಲಿ ಪ್ರತಿದಿನ ಪವಿತ್ರ ಖುರ್‌ಆನಿನ ತಿಲಾವತ್ ಪ್ರಸಾರವಾಗುತ್ತದೆ. ಅದನ್ನು ಸಹ ಆಲಿಸಬೇಕು, ಆದರೆ ನಾವು ಅದನ್ನು ಆಲಿಸಿದ ನಂತರ ಅದರಂತೆ ನಡೆಯಲು ಪ್ರಯತ್ನಿಸುವಾಗ ಮಾತ್ರ ಅದರ ಪ್ರಯೋಜನವನ್ನು ಪಡೆಯಬಹುದು. ಅರಬಿ ಭಾಷೆ ಅರಿಯದ ಮತ್ತು ಪವಿತ್ರ ಖುರ್‌ಆನನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ ಅನೇಕ ಜನರಿಗಾಗಿ ಅದರ ಅನುವಾದಗಳು ಲಭ್ಯವಿದೆ. ತಿಲಾವತ್‌ನೊಂದಿಗೆ ಅದರ ಅನುವಾದಗಳನ್ನು ಓದಬೇಕು. ದರ್ಸ್‌ಗಳನ್ನು ಆಲಿಸುವಾಗ ಅದರ ಬಗ್ಗೆ ನಾವು ಚಿಂತಿಸಬೇಕು. ಖುತ್ಬಗಳಲ್ಲಿ ಮತ್ತು ದರ್ಸ್‌ಗಳಲ್ಲಿ ಖಲೀಫರು ಅದರ ವಿವರಣೆಯನ್ನು ನೀಡುತ್ತಾ ಬಂದಿದ್ದಾರೆ, ಇದರಿಂದ ನಮ್ಮ ಅರಿವು ವರ್ಧಿಸುವುದು.

ಆದ್ದರಿಂದ, ನಾವು ಪವಿತ್ರ ಖುರ್‌ಆನನ್ನು ಓದಿ ಅದನ್ನು ಪಾಲಿಸಲು ಪ್ರಯತ್ನಿಸುವಾಗ ಮಾತ್ರ ಅದರಿಂದ ಪ್ರಯೋಜನ ಪಡೆಯಬಹುದಾಗಿದೆ. ರಮಝಾನ್ ದಿನಗಳಲ್ಲಿ ಅಲ್ಲಾಹನು ಈ ಕುರಿತು ವಿಶೇಷವಾಗಿ ನಮ್ಮ ಗಮನವನ್ನು ಸೆಳೆದಿದ್ದಾನೆ. ಏಕೆಂದರೆ ಅಲ್ಲಾಹನು ಹೇಳುತ್ತಾನೆ: ನಾನು ಪವಿತ್ರ ಖುರ್‌ಆನನ್ನು ರಮಝಾನಿನಲ್ಲಿ ಅವತೀರ್ಣಗೊಳಿಸಿದ್ದೇನೆ. ಆದ್ದರಿಂದ ಪವಿತ್ರ ಖುರ್‌ಆನನ್ನು ನೀವು ವಿಶೇಷವಾಗಿ ಓದಬೇಕು ಮತ್ತು ಅದನ್ನು ಪಾಲಿಸಲು ಪ್ರಯತ್ನಿಸಬೇಕು. ಹಾಗಾದರೆ ಅದು ನಿಮ್ಮ ಜೀವನದ ಭಾಗವಾಗುವುದು. ಅಲ್ಲಾಹನು ಇದರಲ್ಲಿ ಮಾರ್ಗದರ್ಶನವಿದೆ ಎಂದು ಹೇಳಿದ್ದಾನೆ. ನಾವು ಅದನ್ನು ಅನುಸರಿಸುವಾಗ ಮಾತ್ರ ಅದರ ಮಾರ್ಗದರ್ಶನದಿಂದ ಹಾಗೂ ಅದರ ಸತ್ಯ ಮತ್ತು ಅಸತ್ಯದ ನಡುವಿನ ವ್ಯತ್ಯಾಸದ ಜ್ಞಾನದಿಂದ ಪ್ರಯೋಜನ ಪಡೆಯಬಹುದಾಗಿದೆ.

ನಾನು ಹೇಳಿದಂತೆ, ಪವಿತ್ರ ಖುರ್‌ಆನಿನ ಅನುವಾದ ಮತ್ತು ದರ್ಸನ್ನು ಕೇಳಿದ ನಂತರ ನಾವು ಅದನ್ನು ಪಾಲಿಸುವವರಾಗಬೇಕು. ಪವಿತ್ರ ಖುರ್‌ಆನ್ ನೀಡಿದ ಆಜ್ಞೆಗಳನ್ನು ಮತ್ತು ಬೋಧನೆಗಳನ್ನು ನಾವು ಕಾರ್ಯಗತಗೊಳಿಸುವವರಾಗಿರಬೇಕು. ನಾವು ಅದನ್ನು ಕೇಳಿ ಮರೆತರೆ ಅಥವಾ ಓದಿ ಗಮನ ಕೊಡದಿದ್ದರೆ, ಪವಿತ್ರ ಖುರ್‌ಆನಿನಿಂದ ನಾವು ಪಡೆಯಬಹುದಾದ ಪ್ರಯೋಜನಗಳನ್ನು ಪಡೆಯಲು ಸಾಧ್ಯವಿಲ್ಲ.

ಅಲ್ಲಾಹನು ಪವಿತ್ರ ಖುರ್‌ಆನಿನ ಆರಂಭದಲ್ಲಿ, ಸೂರಾ ಬಖರದಲ್ಲಿ ಈ ಕುರಿತು ಗಮನ ಸೆಳೆದಿದ್ದಾನೆ ಮತ್ತು ಅದರ ಪ್ರಾಮುಖ್ಯತೆಯನ್ನು ವಿವರಿಸಿದ್ದಾನೆ. ಅದರ ಮೂರನೇ ವಚನದಲ್ಲಿ. ಅಲ್ಲಾಹನು ಹೇಳುತ್ತಾನೆ, "**ಝಾಲಿಕಲ್ ಕಿತಾಬು ಲಾ ರೈಬ ಫೀಹಿ ಹುದನ್ ಲಿಲ್ ಮುತ್ತಕೀನ್**". (ಅಲ್‌ಬಖರ: 03) ಇದರಲ್ಲಿ ಯಾವುದೇ ಸಂಶಯವಿಲ್ಲ ಮತ್ತು ಧರ್ಮನಿಷ್ಠರಿಗೆ ಮಾರ್ಗದರ್ಶನ ನೀಡುತ್ತದೆ. ಆದ್ದರಿಂದ, ದೇವಭಕ್ತಿಯಲ್ಲಿ ನಡೆಯಲು ಮತ್ತು ನಿಜವಾದ ಸತ್ಯವಿಶ್ವಾಸಿಗಳಾಗಲು, ಈ ಗ್ರಂಥವನ್ನು ಅನುಸರಿಸುವುದು ಅಗತ್ಯವೆಂದು ಅಲ್ಲಾಹನು ಹೇಳಿದ್ದಾನೆ. ರಮಝಾನಿನಲ್ಲಿ, ನಾವು ಭಯಭಕ್ತಿಯೊಂದಿಗೆ ನಡೆಯುವ ಮೂಲಕ ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಪ್ರಯತ್ನಿಸುತ್ತೇವೆ. ನಿಜವಾದ ಸತ್ಯವಿಶ್ವಾಸಿಯಾಗಿ ಒಂದು ಮಾದರಿಯನ್ನು ಸ್ಥಾಪಿಸಲು ಮತ್ತು ಮಾರ್ಗದರ್ಶನವನ್ನು ಪಡೆಯಲು ಮತ್ತು ಅಲ್ಲಾಹನ ಕೃಪೆಗೆ ಅರ್ಹರಾಗಲು ನಾವು ಪ್ರಯತ್ನಿಸುತ್ತೇವೆ. ಆದ್ದರಿಂದ, ನೀವು ಈ ಉದ್ದೇಶವನ್ನು ಹೊಂದಿರುವುದಾದರೆ, ಈ ಗ್ರಂಥವನ್ನು ನಿಮಗೆ ನೀಡಲಾಗಿದೆ, ಅದನ್ನು ಪಾಲಿಸಿರಿ ಎಂದು ಅಲ್ಲಾಹನು ಹೇಳುತ್ತಾನೆ. ನೀವು ಅದನ್ನು ಅನುಸರಿಸುವಾಗ, ನೀವು ಅಸಂಖ್ಯಾತ ಪ್ರಯೋಜನಗಳನ್ನು ಗಳಿಸುವವರಾಗುವಿರಿ. ಪರಿಶುದ್ಧ ಹೃದಯದಿಂದ ಪ್ರಯೋಜನ ಪಡೆಯಲು ಬಯಸುವವರಿಗೆ ಪ್ರಯೋಜನವನ್ನು ನೀಡುವ ಒಂದು ಕಾರಂಜಿಯಾಗಿದೆ ಪವಿತ್ರ ಖುರ್‌ಆನ್ ಎಂದು ಅಲ್ಲಾಹನು ಸ್ಪಷ್ಟವಾಗಿ ಹೇಳಿದ್ದಾನೆ. ಅಂಥವನು ತಖ್ವದಲ್ಲಿ, ದೇವಭಕ್ತಿಯಲ್ಲಿ ಪ್ರಗತಿ ಹೊಂದುವನು ಮತ್ತು ಮಾರ್ಗದರ್ಶನ ಪಡೆದವರಲ್ಲಿ ಗಣಿಸಲ್ಪಡುವನು, ಏಕೆಂದರೆ ಇದು ಯಾವುದೇ ಸಂದೇಹವಿಲ್ಲದ ಮತ್ತು ಧರ್ಮನಿಷ್ಠರಿಗೆ ಮಾರ್ಗದರ್ಶನ ನೀಡುವ ಗ್ರಂಥವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ಇದರ ವರದಾನಗಳ ಮತ್ತು ಅನುಗ್ರಹಗಳ ಬಾಗಿಲು ಯಾವಾಗಲೂ ತೆರೆದಿತ್ತು. ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಇದ್ದಂತೆ ಇದು ಪ್ರತಿ ಕಾಲದಲ್ಲಿಯೂ ಪ್ರಕಾಶಮಾನವಾಗಿದೆ." (ಮಲ್‌ಫೂಝಾತ್, ಸಂಪುಟ–3, ಪುಟ–57, 1984 ಆವೃತ್ತಿ)

ಆದ್ದರಿಂದ, ನೀವು ಶುದ್ಧ ಹೃದಯದಿಂದ ಅದರ ಕಡೆಗೆ ಬಂದರೆ, ನೀವು ಎಲ್ಲ ಕೆಡುಕುಗಳಿಂದ ದೂರವಿರಬಹುದು, ಮಾರ್ಗದರ್ಶನ ಪಡೆದವರಾಗಬಹುದು, ದೇವಭಕ್ತಿಯಲ್ಲಿ ನಡೆಯುವವ ರಾಗಬಹುದು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದಂತೆ, ಇದರ ಅನುಗ್ರಹಗಳು ಯಾವಾಗಲೂ ಜಾರಿಯಲ್ಲಿದೆ, ಅದನ್ನು ಅನುಸರಿಸುವವರು ಯಾವಾಗಲೂ ಎಲ್ಲ ಕೆಡುಕುಗಳಿಂದ ರಕ್ಷಣೆ ಪಡೆಯುವರು. ನಾವು ಪವಿತ್ರ ಖುರ್‌ಆನನ್ನು ಅನುಸರಿಸುತ್ತಾ ಅದರಂತೆ ನಡೆಯಲು ಪ್ರಯತ್ನಿಸಿದರೆ ಮಾರ್ಗಗಳಲ್ಲಿರುವ ಮುಳ್ಳಿನ ಪೊದೆಗಳು ಮುಳ್ಳಿನ ಗಿಡಗಳು, ಮನುಷ್ಯನ ಗಮನವನ್ನು ಸೆಳೆಯುವ, ಅವನನ್ನು ಧರ್ಮದಿಂದ ದೂರವಿರಿಸುವ ಮತ್ತು ಕೆಡುಕಿನ ಕಡೆಗೆ ಕರೆದೊಯ್ಯುವ ತಪ್ಪಾದ ಕೆಲವು ಸಂಗತಿಗಳಿಂದ ದೂರವಿರಬಹುದಾಗಿದೆ. ಆದ್ದರಿಂದ, ರಮಝಾನಿನಲ್ಲಿ ನಾವು ಪವಿತ್ರ ಖುರ್‌ಆನನ್ನು ಓದಲು ಮತ್ತು ಕೇಳಲು ವಿಶೇಷ ಗಮನವನ್ನು ನೀಡುವಾಗ, ನಾವು ಇದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ನಾವು ತರಾವೀಹ್‌ಗೆ ಹೋಗುತ್ತೇವೆ, ದರ್ಸುಗಳನ್ನು ಕೂಡ ಕೇಳುತ್ತೇವೆ. ಮನೆಗಳಲ್ಲಿಯೂ ಪವಿತ್ರ ಖುರ್‌ಆನನ್ನು ಮೊದಲಿಗಿಂತ ಹೆಚ್ಚಾಗಿ ಓದಲಾಗುತ್ತದೆ. ಯಾರಿಗಾದರೂ ಪವಿತ್ರ ಖುರ್‌ಆನನ್ನು ಒಂದು ಬಾರಿ ಓದಿ ಮುಗಿಸಲು ಸಾಧ್ಯವಾಗದೇ ಬಂದರೂ, ಈ ದಿನಗಳಲ್ಲಿ ಸ್ವಲ್ಪ ಸಮಯವಾದರೂ ಖಂಡಿತವಾಗಿಯೂ ತಿಲಾವತ್ ಮಾಡುತ್ತಾರೆ. ಮೊದಲನೆಯದಾಗಿ, ರಮಝಾನಿನಲ್ಲಿ ಒಂದು ಬಾರಿ ಪವಿತ್ರ ಖುರ್‌ಆನ್ ಓದಿ ಮುಗಿಸಲು ಪ್ರಯತ್ನಿಸಬೇಕು. ನಾನು ಹೇಳಿದಂತೆ, ರಮಝಾನಿನಲ್ಲಿ ಒಂದು ಬಾರಿ ಹಝ್ರತ್ ಜಿಬ್ರೀಲ್(ಅ) ರೊಂದಿಗೆ ಪವಿತ್ರ ಖುರ್‌ಆನ್ ಓದಿ ಪೂರ್ಣಗೊಳಿಸುವುದಾಗಿತ್ತು ಹಝ್ರತ್ ಪೈಗಂಬರ್(ಸ)ರ ರೀತಿ. ಆದ್ದರಿಂದ, ಪ್ರಯೋಜನ ಪಡೆಯಲು ಮತ್ತು ಈ ಸುನ್ನತನ್ನು ಅನುಸರಿಸಲು, ನಾವು ಒಂದು ಬಾರಿ ಪವಿತ್ರ ಖುರ್‌ಆನ್ ಓದಿ ಪೂರ್ಣಗೊಳಿಸಬೇಕು. ಎರಡನೆಯದಾಗಿ, ನಾನು ಹೇಳಿದಂತೆ, ಅರಬೀ ಭಾಷೆ ಗೊತ್ತಿಲ್ಲದವರು, ಅರಬ್ ದೇಶದವರನ್ನು ಹೊರತುಪಡಿಸಿ ಲೋಕದಲ್ಲಿ ಅರಬಿ ಭಾಷೆ ಗೊತ್ತಿಲ್ಲದ ಅನೇಕ ಜನರಿದ್ದಾರೆ. ಅಂಥವರು ಪವಿತ್ರ ಖುರ್‌ಆನಿನ ಅನುವಾದ ಮತ್ತು ವ್ಯಾಖ್ಯಾನವನ್ನು ಓದಬೇಕು. ಕಳೆದ ವಾರದ ಖುತ್ಬದಲ್ಲಿ ಹೇಳಿದಂತೆ, ನಾವು ಅದನ್ನು ಪಾಲಿಸಲು ಅದರಿಂದ ಅಂಶಗಳನ್ನು ಹುಡುಕಬೇಕು. ಹಾಗಾದರೆ ನಾವು ಅದನ್ನು ಪಾಲಿಸುವವರಾಗಬಹುದು ಮತ್ತು ಮಾರ್ಗದರ್ಶನವನ್ನು ಪಡೆಯುವವರಾಗಬಹುದು. ನಮಗೆ ಒಳ್ಳೆಯದು ಮತ್ತು ಕೆಟ್ಟದ್ದರ ಸರಿಯಾದ ಅರಿವು ಲಭಿಸುವುದು. ಸರಿಯಾದ ಮಾರ್ಗದರ್ಶನದ ಬಗ್ಗೆ ಗೊತ್ತಾಗುವುದು. ತಖ್ವದ, ದೇವಭಕ್ತಿಯ ಸರಿಯಾದ ಮಾರ್ಗಗಳ ಜ್ಞಾನ ಲಭಿಸುವುದು. ಅನಂತರ ನಾವು ಅದರಂತೆ ನಡೆದುಕೊಂಡರೆ ಅಲ್ಲಾಹನ ಅನುಗ್ರಹಗಳಿಂದ ಪ್ರಯೋಜನವನ್ನು ಪಡೆಯುವವರಾಗಬಹುದು. ಪವಿತ್ರ ಖುರ್‌ಆನ್ ತುಂಬಾ ಕಷ್ಟಕರವಾದ ಗ್ರಂಥವಾಗಿದೆ ಎಂದು ಕೆಲವರು ಭಾವಿಸುತ್ತಾರೆ, ಆದರೆ ಅಲ್ಲಾಹನು ಹೇಳುತ್ತಾನೆ, "**ವಲಕದ್ ಯಸ್ಸರ್‌ನಲ್ ಖುರ್‌ಆನ ಲಿಝ್ಝಿಕ್ರಿ ಫಹಲ್ ಮಿಮ್ ಮುದ್ದಕಿರ್**". (ಅಲ್‌ಖಮರ್: 18) ಎಂದರೆ, ಖಂಡಿತವಾಗಿಯೂ ನಾವು ಖುರ್‌ಆನನ್ನು ಬೋಧನೆಗಾಗಿ ಸುಲಭಗೊಳಿಸಿದ್ದೇವೆ, ಆದ್ದರಿಂದ ಉಪದೇಶವನ್ನು ಕೇಳುವರು ಯಾರಾದರೂ ಇದ್ದಾರೆಯೇ?

ಆದ್ದರಿಂದ, ಇದು ಅಲ್ಲಾಹನ ವಾದವಾಗಿದೆ, ಇದು ಮನುಷ್ಯನನ್ನು ಸೃಷ್ಟಿಸಿದವನ ಪ್ರತಿಪಾದನೆಯಾಗಿದೆ. ಅವನು ಮನುಷ್ಯನ ಸ್ವಭಾವವನ್ನು ಬಲ್ಲನು, ಅವನ ಪರಿಸ್ಥಿತಿಗಳನ್ನು ಬಲ್ಲನು, ಅವನ ಸಾಮರ್ಥ್ಯಗಳನ್ನು ಬಲ್ಲನು. ಅಲ್ಲಾಹನು ಹೇಳುತ್ತಾನೆ, "ನಾನು ಪವಿತ್ರ ಖುರ್‌ಆನಿನಲ್ಲಿ ಸುಲಭವಾದ ಬೋಧನೆಯನ್ನು ನೀಡಿದ್ದೇನೆ, ಆದರೆ ಅದನ್ನು ಪಾಲಿಸಲು ನೀವು ಪ್ರಯತ್ನಿಸಲೇ ಬೇಕಾಗುವುದು. ಪ್ರಯತ್ನಿಸಿದರೆ, ಯಶಸ್ವಿಯೂ ಆಗುವಿರಿ ಮತ್ತು ಅದರ ಪ್ರಕಾರ ನಡೆಯುವವರೂ ಆಗುವಿರಿ. ಆದ್ದರಿಂದ, ನಿಮಗೆ ಇರುವ ಸಲಹೆ ಏನೆಂದರೆ, ಅದನ್ನು ಪಾಲಿಸಲು ನಿಮ್ಮಿಂದ ಸಾಧ್ಯವಾದ ಎಲ್ಲ ಪ್ರಯತ್ನವನ್ನು ಮಾಡಬೇಕು. ಕೇವಲ ಹೆಸರಿಗೆ ಮುಸ್ಲಿಮರಾಗಬಾರದು.

ಅಹ್ಮದಿಯರಾದ ನಾವಂತೂ ಹೆಸರಿಗೆ ಮಾತ್ರ ಮುಸ್ಲಿಮರಾಗಲೇ

ಬಾರದು. ಏಕೆಂದರೆ ನಾವು ಈ ಕಾಲಘಟ್ಟದಲ್ಲಿ ಮಸೀಹ್ ಮೌಊದ್ ಮತ್ತು ಮೆಹದಿ ಮೌಊದ್‌ರನ್ನು ನಂಬಿದ್ದೇವೆ, ಅಲ್ಲಾಹನ ಸಾಮೀಪ್ಯವನ್ನು ಪಡೆಯಲಿಕ್ಕಾಗಿ ನಾವು ನಂಬಿಕೆ ಇರಿಸಿದ್ದೇವೆ. ಅಲ್ಲಾಹನ ಭವಿಷ್ಯವಾಣಿಯ ಪ್ರಕಾರ ಆಗಮಿಸಿದ ವ್ಯಕ್ತಿಯನ್ನು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತಾ ಅದನ್ನು ಪೂರೈಸಲು ನಂಬಿದ್ದೇವೆ. ನಾವು ನಂಬಿಕೆ ಇರಿಸಿಕೊಂಡಿರುವ ಕಾರಣದಿಂದ ನಾವು ಪವಿತ್ರ ಖುರ್‌ಆನಿನ ಆದೇಶಗಳನ್ನು ಪಾಲಿಸುವವರೂ ಆಗಬೇಕು. ಹಾಗಲ್ಲವಾದರೆ, ನಾವು ಬೈಅತ್ ಮಾಡಿದ್ದೇವೆ ಎಂದು ವಾದಿಸುವುದರಿಂದ ಯಾವುದೇ ಪ್ರಯೋಜನವಿಲ್ಲ.

ಈ ಖುರ್‌ಆನನ್ನು ಸುಲಭಗೊಳಿಸಿದ್ದೇನೆ ಮತ್ತು ಮಾನವ ಸ್ವಭಾವವನ್ನು ಗಮನದಲ್ಲಿಟ್ಟುಕೊಂಡು, ಪ್ರತಿಯೊಬ್ಬ ಮನುಷ್ಯನು ಸುಲಭವಾಗಿ ಪಾಲಿಸಲಿಕ್ಕಾಗಿ ಸರಳ ಮತ್ತು ಸುಲಭವಾದ ರೀತಿಯಲ್ಲಿ ಉಪದೇಶ ನೀಡಿದ್ದೇನೆ ಎಂದು ಅಲ್ಲಾಹನು ಹೇಳಿದ್ದಾನೆ. ಅಲ್ಲಾಹನು ನಿಯಮಗಳನ್ನು ತಿಳಿಸಿದ್ದಾನೆ, ಆಜ್ಞೆಗಳನ್ನು ವಿವರಿಸಿದ್ದಾನೆ, ಆರಾಧನೆಗಳ ವಿಧಾನಗಳನ್ನು ವಿವರಿಸಿದ್ದಾನೆ. ಆರ್ಥಿಕ ಮತ್ತು ಸಾಮಾಜಿಕ ಆದೇಶಗಳನ್ನು ನೀಡಿದ್ದಾನೆ. ಪರಸ್ಪರ ಸಂಬಂಧಗಳು ಹೇಗೆ ಇರಬೇಕು ಎಂಬುದನ್ನು ವಿವರಿಸಿದ್ದಾನೆ. ನೀವು ಅವುಗಳ ಪ್ರಕಾರ ನಡೆದರೆ ನಿಮ್ಮ ಜೀವನವೂ ನೆಮ್ಮದಿಯಿಂದ ಸಾಗುವುದು, ನಿಮ್ಮ ಸುತ್ತಮುತ್ತಲಿನ ವಾತಾವರಣವೂ ಶಾಂತಿಯುತವಾಗಿರುವುದು ಮತ್ತು ನೀವು ಅಲ್ಲಾಹನ ಅನುಗ್ರಹಗಳಿಗೆ ಪಾತ್ರದಾರರಾಗುವಿರಿ. ಆದ್ದರಿಂದ, ಈ ವಿಷಯವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು. ನಾವು ಇದನ್ನು ಅರ್ಥಮಾಡಿಕೊಂಡರೆ, ಅಲ್ಲಾಹನ ಅನುಗ್ರಹಗಳಿಗೆ ಅರ್ಹರಾಗುತ್ತಾ ಹೋಗುವೆವು. ನಮ್ಮ ಕೌಟುಂಬಿಕ ಸಂಬಂಧಗಳೂ ಸರಿಯಾಗಿರುವುದು, ನಮ್ಮ ಸಮಾಜದಲ್ಲಿನ ಸಂಬಂಧಗಳೂ ಸರಿಯಾಗಿರುವುದು. ಆಗ ನಮ್ಮ ಇತರ ಬೌದ್ಧಿಕವಾದ ಬುದ್ಧಿಪರವಾದ ಸಾಮರ್ಥ್ಯಗಳು ಸಹ ಬಹಳಷ್ಟು ಉತ್ತಮಗೊಳ್ಳುವುದು. ಅಲ್ಲಾಹನ ಬಗ್ಗೆಗಿನ ಅರಿವನ್ನು ಮತ್ತು ಪರಿಜ್ಞಾನವನ್ನು ಗಳಿಸುವುದರ ಬಗ್ಗೆಯೂ ನಮ್ಮ ಗಮನವು ಹೆಚ್ಚಾಗುವುದು.

ಈ ಯುಗದಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬಲು ಸಾಧ್ಯವಾದ ಅಹ್ಮದಿಯರು ಅದೃಷ್ಟವಂತರು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ರ)ರನ್ನು ಹಕಮ್ ಮತ್ತು ಅದಲ್ ಆಗಿ ನ್ಯಾಯಧೀಶ ಮತ್ತು ತೀರ್ಪುಗಾರರಾಗಿ ಕಳುಹಿಸಿದ್ದಾನೆ. ಅವರು ನಮಗೆ ಪವಿತ್ರ ಖುರ್‌ಆನಿನ ರಹಸ್ಯ ನಿಧಿಗಳನ್ನು ನೀಡಿದರು ಮತ್ತು ಪವಿತ್ರ ಖುರ್‌ಆನಿನ ಅಪಾರ ಜ್ಞಾನವನ್ನು ಹೊರತೆಗೆದು ನಮ್ಮ ಮುಂದೆ ಇಟ್ಟರು. ನಮ್ಮ ಶಿಕ್ಷಣ ಮತ್ತು ತರಬೇತಿಗಾಗಿ, ನಾವು ಕೆಲವೊಮ್ಮೆ ಅರ್ಥಮಾಡಿಕೊಳ್ಳಲು ಸಾಧ್ಯವಾಗದ ಆಜ್ಞೆಗಳನ್ನು ಕೂಡ ವಿವರಿಸುವ ಮೂಲಕ ನಮಗೆ ಸುಲಭಗೊಳಿಸಿದರು. "ನಾನು ಸುಲಭಗೊಳಿಸಿದ್ದೇನೆ" ಎಂದು ಅಲ್ಲಾಹನು ಹೇಳುವುದರ ಜೊತೆಗೆ, ಸುಲಭಗೊಳಿಸಲು ವಿವಿಧ ಕಾಲಗಳಲ್ಲಿ ಶಿಕ್ಷಕರನ್ನು ಕೂಡ ಕಳುಹಿಸಿದ್ದಾನೆ. ಈ ಕಾಲಘಟ್ಟದಲ್ಲಿ, ಈ ಯುಗದಲ್ಲಿ ಅರಿವು ಮತ್ತು ಪರಿಜ್ಞಾನದ ಬಾಗಿಲುಗಳನ್ನು ತೆರೆಯಲು ಹಝುರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರನ್ನು ಅಲ್ಲಾಹನು ಕಳುಹಿಸಿದನು. ಅವರು ನಮಗೆ ಎಲ್ಲವನ್ನೂ ತಿಳಿಸಿದ್ದಾರೆ. ಹಝುರತ್ ಮಸೀಹ್ ಮೌಊದ್ ಅಲೈಸಲಾಮರ ವಿವರಣೆಯನ್ನು, ಅರ್ಥಗಳನ್ನು, ಪವಿತ್ರ ಖುರ್‌ಆನಿನ ವ್ಯಾಖ್ಯಾನವನ್ನು ಅರ್ಥಮಾಡಿಕೊಂಡು ಅದನ್ನು ಪಾಲಿಸದಿದ್ದರೆ ಅದು ನಮ್ಮ ದೌರ್ಭಾಗ್ಯವಾಗುವುದು. ಅಲ್ಲಾಹನು ಈ ಕಾಲದಲ್ಲಿ ತನ್ನ ವಾಗ್ದಾನದ ಪ್ರಕಾರ ಮತ್ತು ಹಝುರತ್ ಪೈಗಂಬರ್(ಸ)ರ ಭವಿಷ್ಯವಾಣಿಯ ಪ್ರಕಾರ ಒಬ್ಬ ಪ್ರತಿನಿಧಿಯನ್ನು ಕಳುಹಿಸಿದ್ದಾನೆ. ಆದ್ದರಿಂದ, ಅವರನ್ನು ನಂಬುವುದು, ಅವರ ಮಾತುಗಳನ್ನು ಕೇಳುವುದು, ಆಲಿಸುವುದು ಮತ್ತು ಅವರು ಪವಿತ್ರ ಖುರ್‌ಆನಿಗೆ ನೀಡಿರುವ ವ್ಯಾಖ್ಯಾನಗಳ ಬಗ್ಗೆ ಚಿಂತಿಸುವುದು ಮತ್ತು ಅವುಗಳ ಪ್ರಕಾರ ನಡೆಯುವುದು ಈಗ ನಮ್ಮ ಕೆಲಸವಾಗಿದೆ. ಹಾಗಾದರೆ ನಾವು ಜೀವನದಲ್ಲಿ ಯಶಸ್ವಿಯಾಗುವೆವು. ಖಲೀಫರು ಸಹ ನಮಗೆ ಪವಿತ್ರ ಖುರ್‌ಆನಿನ ವ್ಯಾಖ್ಯಾನಗಳನ್ನು ತಿಳಿಸಿಕೊಟ್ಟಿದ್ದಾರೆ. ಹಝುರತ್ ಮುಸ್ಲಿಹ್ ಮೌಊದ್(ರ) ತಫ್ಸೀರ್ ಕಬೀರನ್ನು ಬರೆದಿದ್ದಾರೆ, ಅದರಲ್ಲಿ ಸುಮಾರು ಅರ್ಧದಷ್ಟು ಖುರ್‌ಆನಿನ ವ್ಯಾಖ್ಯಾನವಿದೆ. ಇದರ ಜೊತೆಗೆ ಇತರ ಅನುವಾದಗಳು ಮತ್ತು ವ್ಯಾಖ್ಯಾನಗಳಿವೆ, ತಫ್ಸೀರ್ ಸಗೀರ್‌ನಲ್ಲೂ ಸಾಕಷ್ಟು ವಿವರಣೆಗಳಿವೆ. ಇವು ಆಜ್ಞೆಗಳನ್ನು ಸ್ಪಷ್ಟವಾಗಿ ವಿವರಿಸುವ ಗ್ರಂಥಗಳಾಗಿವೆ. ಈ ವ್ಯಾಖ್ಯಾನಗಳ ಅನುವಾದಗಳು ಇಂಗ್ಲಿಷ್‌ನಲ್ಲಿಯೂ ಆಗುತ್ತಿವೆ, ಅರಬಿಯಲ್ಲೂ ಆಗುತ್ತಿವೆ. ಜರ್ಮನ್ ಮುಂತಾದ ಭಾಷೆಗಳಲ್ಲೂ ಅನುವಾದಗಳು ಆಗುತ್ತಿವೆ. ಆದ್ದರಿಂದ ರಮಝಾನ್ ತಿಂಗಳಲ್ಲಿ ಈ ಬಗ್ಗೆ ವಿಶೇಷವಾದ ಗಮನವನ್ನು ನೀಡಬೇಕಾಗಿದೆ. ರಮಝಾನ್ ತಿಂಗಳಲ್ಲಿ ಪವಿತ್ರ ಖುರ್‌ಆನಿನ ತಿಲಾವತ್, ಅಥವಾ ಪಾರಾಯಣ ಮಾಡುವುದಕ್ಕೆ ನಾವು ಗಮನ ನೀಡುವ ಜೊತೆಗೆ, ಒಂದು ಬಾರಿ ಅದನ್ನು ಓದಿ ಪೂರ್ಣಗೊಳಿಸಲು ಪ್ರಯತ್ನಿಸುವ ಜೊತೆಗೆ, ಅದರ ಅರ್ಥಗಳ ಬಗ್ಗೆ ಚಿಂತಿಸಲು, ಅದರ ಉದ್ದೇಶಗಳ ಬಗ್ಗೆ ಚಿಂತಿಸಲು ಮತ್ತು ಆಜ್ಞೆಗಳನ್ನು ಹುಡುಕಲು ಗಮನ ನೀಡಬೇಕು ಮತ್ತು ಅವುಗಳನ್ನು ಹುಡುಕಿ ನಮ್ಮ ಜೀವನದ ಭಾಗವಾಗಿಸಲು ಪ್ರಯತ್ನಿಸಬೇಕು. ಪವಿತ್ರ ಖುರ್‌ಆನನ್ನು ಪ್ರೀತಿಸುವುದು ಮಾತ್ರ ಸಾಕಾಗುವುದಿಲ್ಲ. ಅದನ್ನು ಜೋಪಾನವಾಗಿ ಇಡುವುದು ಮಾತ್ರ ಸಾಕಾಗುವುದಿಲ್ಲ, ಕೇವಲ ಹಣೆಗೆ ತಾಗಿಸುವುದು ಮತ್ತು ಚುಂಬಿಸುವುದು ಸಾಕಾಗುವುದಿಲ್ಲ. ಮಕ್ಕಳ ಪವಿತ್ರ ಖುರ್‌ಆನಿನ ಆಮೀನ್‌ಗಾಗಿ ಮಕ್ಕಳ ಪೋಷಕರು ನನ್ನ ಬಳಿ ಬರುತ್ತಾರೆ. ಅವರು ನೆನಪಿಟ್ಟುಕೊಳ್ಳಬೇಕು, ಅವರು ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಿ ಒಂದು ಕರ್ತವ್ಯವನ್ನು ಪೂರೈಸಿಕೊಂಡಿದ್ದಾರೆ. ಆದರೆ ಈಗ ಆ ಪವಿತ್ರ ಖುರ್‌ಆನನ್ನು ಓದಲಿಕ್ಕೆ ಒಂದು ಸ್ಥಾಯಿಯಾದ ಆಸಕ್ತಿಯನ್ನು ಉಂಟುಮಾಡುವುದು ಅವರ ಕೆಲಸವಾಗಿದೆ. ತಂದೆತಾಯಂದಿರು ಸ್ವತಃ ಈ ಕುರಿತು ಗಮನ ನೀಡುವಾಗ ಮಾತ್ರ ಇದು ಸಾಧ್ಯವಾಗುವುದು. ಅವರು ಸಹ ಪವಿತ್ರ ಖುರ್‌ಆನನ್ನು ನಿಯಮಿತವಾಗಿ ಓದುವವರಾಗಿರಬೇಕು, ಇದರಿಂದ ನಮ್ಮ ತಂದೆತಾಯಂದಿರು ಪವಿತ್ರ ಖುರ್‌ಆನ್ ಓದುತ್ತಿದ್ದಾರೆ ಎಂದು ಮಕ್ಕಳು ನೋಡುವರು. ಅದರ ಅನುವಾದ ಮತ್ತು ವ್ಯಾಖ್ಯಾನವನ್ನು ಸಹ ಹೆತ್ತವರು ಓದಬೇಕು, ಇದರಿಂದ ಪವಿತ್ರ ಖುರ್‌ಆನಿನ ಆಜ್ಞೆಗಳು ಏನೆಂದು ಅರ್ಥವಾಗುವುದು ಮತ್ತು ಮಕ್ಕಳು ಪ್ರಶ್ನೆಗಳನ್ನು ಕೇಳುವಾಗ ಅವುಗಳಿಗೆ ಉತ್ತರಗಳನ್ನು ನೀಡಬಹುದಾಗಿದೆ. ಕೆಲವು ಮಕ್ಕಳು ಸಣ್ಣ ಸಣ್ಣ ಪ್ರಶ್ನೆಗಳನ್ನು ಕೇಳುತ್ತಾರೆ. ಆಗ ಅವರ ತಂದೆತಾಯಂದಿರು ಅದರ ಉತ್ತರವೇನು ಎಂದು ನನಗೆ ಪತ್ರ ಬರೆದು ಕೇಳುತ್ತಾರೆ. ಆದರೆ ಪವಿತ್ರ ಖುರ್‌ಆನಿನ ಅನುವಾದ ಮತ್ತು ವ್ಯಾಖ್ಯಾನವನ್ನು ಸ್ವಲ್ಪವಾದರೂ ಓದಿದ್ದರೆ, ತಂದೆತಾಯಂದಿರು ಸ್ವತಃ ಆ ಪ್ರಶ್ನೆಗಳಿಗೆ ಉತ್ತರ ನೀಡಬಹುದಾಗಿದೆ. ಅವರಿಗೆ ಯಾವುದೇ ಸಹಾಯದ ಅಗತ್ಯ ಬರದು.

ಆದ್ದರಿಂದ, ಪವಿತ್ರ ಖುರ್‌ಆನಿನ ಆಮೀನ್ ಮಾಡಿಸಿದ ನಂತರ ಹೆತ್ತವರ ಜವಾಬ್ದಾರಿ ಇನ್ನಷ್ಟು ವರ್ಧಿಸುತ್ತದೆ. ಏಕೆಂದರೆ ಅಲ್ಲಾಹನು ನಮಗೆ ನೀಡಿದ ಮಾರ್ಗದರ್ಶಕ ಗ್ರಂಥ, ಅರಿವಿನ ಗ್ರಂಥವನ್ನು ನಾವು ನಮ್ಮ ಮಕ್ಕಳಿಗೆ ಕಲಿಸಿದ್ದೇವೆ, ಈಗ ಅವರ ಹೃದಯದಲ್ಲಿ ಅದರ ಪ್ರೀತಿಯನ್ನು ಮೂಡಿಸುವುದು ತಂದೆತಾಯಂದಿರ ಕರ್ತವ್ಯವಾಗಿದೆ. ನಾವು ಸ್ವತಃ ಆ ಗ್ರಂಥದ ಬಗ್ಗೆ ಪ್ರೀತಿಯನ್ನು ವ್ಯಕ್ತಪಡಿಸುವಾಗ ಮಾತ್ರ ಮಕ್ಕಳಲ್ಲೂ ಆ ಪ್ರೀತಿ ಮೂಡುವುದು. ಆದ್ದರಿಂದ, ಪ್ರತಿಯೊಬ್ಬ ಅಹ್ಮದಿಯೂ ಸ್ವತಃ ಮತ್ತು ತನ್ನ ಹೆಂಡತಿ ಮಕ್ಕಳು ಸಹ ಪವಿತ್ರ ಖುರ್‌ಆನನ್ನು ಓದುವುದು ಮತ್ತು ಅದರ ಪಾರಾಯಣ ಅಥವಾ ತಿಲಾವತ್ ಮಾಡುವುದರ ಕುರಿತು ಗಮನ ನೀಡುವುದರ ಬಗ್ಗೆ ಚಿಂತಿಸಬೇಕು. ಅನುವಾದವನ್ನು ಓದಿದ ನಂತರ ಹಝುರತ್ ಮಸೀಹ್ ಮೌಊದ್(ಅ)ರ ವ್ಯಾಖ್ಯಾನವನ್ನು ಓದಬೇಕು, ಖಲೀಫರ ವ್ಯಾಖ್ಯಾನವನ್ನು ಓದಬೇಕು, ನಾನು ಹೇಳಿದಂತೆ ಕೆಲವು ಲಭ್ಯವಿದೆ, ಆಡಿಯೋ ಕೂಡ ಎಮ್‌ಟಿಎಯಲ್ಲಿ ಬರುತ್ತದೆ. ನಾವು ಪವಿತ್ರ ಖುರ್‌ಆನನ್ನು ಈ ರೀತಿ ಓದುತ್ತಿಲ್ಲವೆಂದಾದರೆ, ನಾವು ಚಿಂತಿಸಬೇಕು ಮತ್ತು ಪ್ರತಿಯೊಬ್ಬರೂ ತಮ್ಮ ಬಗ್ಗೆ ಯೋಚಿಸಬೇಕು, ಕೇವಲ ಅಹ್ಮದಿಯರಾಗಿ ಬೈಅತಿನ ಹಕ್ಕನ್ನು ಪೂರೈಸುತ್ತೇವೆಯೇ? ಅಥವಾ ಹಝ್ರತ್ ಮಸೀಹ್ ಮೌಊದ್ ಆಗಮಿಸಿದ ಉದ್ದೇಶವನ್ನು ನಾವು ಸಾಧಿಸಬೇಡವೇ? ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೇಳುತ್ತಾರೆ:

“ಹೆಚ್ಚಿನ ಮುಸಲ್ಮಾನರು ಪವಿತ್ರ ಖುರ್‌ಆನನ್ನು ತ್ಯಜಿಸಿದ್ದಾರೆ, ಬಿಟ್ಟುಕೊಂಡಿದ್ದಾರೆ ಎಂಬುದು ನಿಜ, ಆದರೆ ಪವಿತ್ರ ಖುರ್‌ಆನಿನ ಪ್ರಕಾಶ ಮತ್ತು ಅನುಗ್ರಹಗಳು ಹಾಗೂ ಅದರ ಪ್ರಭಾವಗಳು ಸದಾ ಜೀವಂತವಾಗಿವೆ ಮತ್ತು ಹೊಸದಾಗಿಯೇ ತಾಜಾವಾಗಿಯೇ ಇವೆ. ಉದಾಹರಣೆಗೆ, ನನ್ನನ್ನು ಈ ಕಾಲಘಟ್ಟದಲ್ಲಿ ಅದಕ್ಕೆ ಪುರಾವೆಯಾಗಿ ಕಳುಹಿಸಲಾಗಿದೆ.” “ನನ್ನನ್ನು ಈ ಕಾಲದಲ್ಲಿ ಸಾಕ್ಷ್ಯಕ್ಕಾಗಿ ಕಳುಹಿಸಲಾಗಿದೆ. ಅಲ್ಲಾಹನು ಯಾವಾಗಲೂ ತಕ್ಕ ಸಮಯದಲ್ಲಿ ತನ್ನ ದಾಸರನ್ನು ಅದರ ಬೆಂಬಲ ಮತ್ತು ಸಹಾಯಕ್ಕಾಗಿ ಕಳುಹಿಸುತ್ತಾನೆ, ಏಕೆಂದರೆ ಅವನು ವಾಗ್ದಾನ ಮಾಡಿದ್ದಾನೆ, "**ಇನ್ನಾ ನಹ್ನು ನಝ್ಝಲ್ನಝ್ ಝಿಕ್ರ ವ ಇನ್ನಾ ಲಹು ಲಹಾಫಿಝೂನ್**". ಅಂದರೆ, "ನಿಸ್ಸಂದೇಹವಾಗಿ ನಾವು ಈ ಝಿಕ್ರನ್ನು, ಅಂದರೆ ಪವಿತ್ರ ಖುರ್‌ಆನನ್ನು ಇಳಿಸಿದ್ದೇವೆ ಮತ್ತು ನಾವೇ ಅದರ ಸಂರಕ್ಷಕರು".

(ಮಲ್‌ಫೂಝಾತ್, ಸಂಪುಟ–8, ಪುಟ–116–117, 1984)

ಆದ್ದರಿಂದ, ಪ್ರತಿಯೊಬ್ಬ ಅಹ್ಮದಿಯೂ ನೆನಪಿಟ್ಟುಕೊಳ್ಳಬೇಕು, ನಾವು ಪವಿತ್ರ ಖುರ್‌ಆನಿನ ಅನುಗ್ರಹದಿಂದ ಮಾತ್ರ ಎಲ್ಲವನ್ನೂ ಪಡೆಯಲು ಸಾಧ್ಯ. ಆದ್ದರಿಂದ ನಾವು ಈ ಕುರಿತು ಹೆಚ್ಚು ಗಮನ ನೀಡಬೇಕು. ಹಝುರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

“ಪವಿತ್ರ ಖುರ್‌ಆನನ್ನು ಬಿಟ್ಟುಕೊಂಡು, ತ್ಯಜಿಸಿಕೊಂಡು ಯಶಸ್ಸು ಅಸಾಧ್ಯ ಮತ್ತು ಅಸಂಭವನೀಯ. ಅದಿಲ್ಲದೇ ಜನರು ಹುಡುಕುತ್ತಿರುವ

ಯಶಸ್ಸು ಕೇವಲ ಕಾಲ್ಪನಿಕವಾಗಿದೆ. ಸಹಾಬಿಯರ ಮಾದರಿಗಳನ್ನು ನಿಮ್ಮ ಮುಂದೆ ಇರಿಸಿ. ನೋಡಿರಿ, ಅವರು ಅಲ್ಲಾಹನ ಪ್ರವಾದಿ(ಸ)ರನ್ನು ಅನುಸರಿಸಿದಾಗ ಮತ್ತು ದೀನಿಗೆ ಭೌತಿಕತೆಗಿಂತ ಪ್ರಾಮುಖ್ಯವನ್ನು ನೀಡಿದಾಗ, ಎಂದರೆ ಧರ್ಮವನ್ನು ಲೌಕಿಕತೆಯ ಮೇಲೆ ಇರಿಸಿದಾಗ, ಅಲ್ಲಾಹನು ಅವರೊಡನೆ ಮಾಡಿದ ಎಲ್ಲ ವಾಗ್ದಾನಗಳು ಈಡೇರಿದವು. ಆರಂಭದಲ್ಲಿ ವಿರೋಧಿಗಳು ನಗುತ್ತಿದ್ದರು, ಸಹಾಬಿಯರಿಗೆ ಸ್ವತಂತ್ರವಾಗಿ ಮನೆಯಿಂದ ಹೊರಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಸಾಮ್ರಾಜ್ಯಗಳು ಲಭಿಸುವುದಾಗಿ ಅವರು ಹೇಳುತ್ತಿದ್ದರು. ಅವರು ರಸೂಲುಲ್ಲಾಹ್(ಸ)ರ ಆಜ್ಞೆಗೆ ಶರಣಾಗಿ, ಶತಮಾನಗಳಿಂದ ಅವರ ಪಾಲಿಗೆ ಬರದಿದ್ದದ್ದನ್ನು ಪಡೆದರು." (ಮಲ್‌ಫೂಝಾತ್, ಸಂಪುಟ-2, ಪುಟ-157, 1984)

ಆದ್ದರಿಂದ, ಪವಿತ್ರ ಖುರ್‌ಆನ್ ಮಾತ್ರ ನಮಗೆ ಯಶಸ್ಸನ್ನು ನೀಡುವ ಬೋಧನೆಯಾಗಿದೆ ಮತ್ತು ನಾವು ಅದರ ಬೋಧನೆಗಳನ್ನು ಪಾಲಿಸಿದರೆ ಮತ್ತು ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಪ್ರಯತ್ನಿಸಿದರೆ ಮಾತ್ರ ನಾವು ಯಶಸ್ಸನ್ನು ಪಡೆಯಲು ಸಾಧ್ಯವೆಂದು ನಾವು ಯಾವಾಗಲೂ ನೆನಪಿಟ್ಟುಕೊಳ್ಳಬೇಕು.

ಹಝ್ರತ್ ಅಬೂ ಮೂಸಾ(ರ)ರಿಂದ ವರದಿಯಾದ ಒಂದು ಹದೀಸ್‌ನಲ್ಲಿ, ಹಝ್ರತ್ ಪೈಗಂಬರ್(ಸ) ಹೇಳುತ್ತಾರೆ: "ಪವಿತ್ರ ಖುರ್‌ಆನನ್ನು ಓದಿ ಅದರಂತೆ ನಡೆಯುವ ಸತ್ಯವಿಶ್ವಾಸಿಯ ಉದಾಹರಣೆ, ಉತ್ತಮವಾದ ರುಚಿ ಮತ್ತು ಪರಿಮಳ ಎರಡೂ ಇರುವ ಹಣ್ಣಿನಂತೆ ಆಗಿದೆ. ಪವಿತ್ರ ಖುರ್‌ಆನನ್ನು ಓದದಿದ್ದರೂ ಅದನ್ನು ಪಾಲಿಸುವ ಸತ್ಯವಿಶ್ವಾಸಿಯ ಉದಾಹರಣೆ, ಎಂದರೆ ಇಲ್ಲಿಂದ ಅಲ್ಲಿಂದ ಮಾತುಗಳನ್ನು ಆಲಿಸಿ ಅದರಂತೆ ನಡೆಯುವ ಸತ್ಯವಿಶ್ವಾಸಿಯ ಉದಾಹರಣೆ, ಖರ್ಜೂರದ ಹಣ್ಣಿನಂತೆ ಆಗಿದೆ. ಅದರ ರುಚಿ ಉತ್ತಮವಾಗಿದೆ. ಆದರೆ ಅದಕ್ಕೆ ಯಾವುದೇ ಪರಿಮಳವಿಲ್ಲ. ಪವಿತ್ರ ಖುರ್‌ಆನನ್ನು ಓದುವ ಕಪಟವಿಶ್ವಾಸಿಯ ಉದಾಹರಣೆ, ಪರಿಮಳಯುಕ್ತ ಗಿಡದಂತೆ ಆಗಿದೆ. ಅದರ ಪರಿಮಳವು ಚೆನ್ನಾಗಿದೆ ಆದರೆ ರುಚಿ ಕಹಿಯಾಗಿದೆ. ಪವಿತ್ರ ಖುರ್‌ಆನನ್ನು ಓದದ ಕಪಟವಿಶ್ವಾಸಿಯ ಉದಾಹರಣೆ, ಪರಿಮಳ ಮತ್ತು ರುಚಿ ಎರಡೂ ಇಲ್ಲದ ಕಹಿ ಹಣ್ಣಿನಂತೆ ಆಗಿದೆ. (ಸಹೀಹ್ ಬುಖಾರಿ ಕಿತಾಬುಲ್ ಅತ್‌ಅಮ, ಹದೀಸ್-5427)

ಆದ್ದರಿಂದ, ನಾವು ಪವಿತ್ರ ಖುರ್‌ಆನನ್ನು ಓದಬೇಕು ಮತ್ತು ಅದನ್ನು ಅರ್ಥಮಾಡಿಕೊಂಡು ಅದರ ಪ್ರಕಾರ ನಡೆದುಕೊಳ್ಳುವುದು ಸಹ ಅಗತ್ಯವಾಗಿದೆ ಎಂದು ಇದರಿಂದ ಸ್ಪಷ್ಟವಾಗುತ್ತದೆ. ನಾವು ಅದನ್ನು ಪಾಲಿಸುವಾಗ ಅದರ ಪ್ರಕಾರ ನಡೆಯುವಾಗ ನಾವು ರುಚಿ ಮತ್ತು ಪರಿಮಳ ಎರಡೂ ಚೆನ್ನಾಗಿರುವ ಪರಿಮಳಯುಕ್ತ ಹಣ್ಣಿನಂತೆ ಆಗಬಹುದಾಗಿದೆ. ಇದು ಬಹಳ ಸುಂದರವಾದ ಉದಾಹರಣೆಯಾಗಿದೆ.

ರುಚಿಕರವಾದ ಮತ್ತು ಪರಿಮಳಯುಕ್ತವಾದ ಆಹಾರಗಳನ್ನು, ಸ್ವಾದಿಷ್ಟ ಹಣ್ಣುಗಳನ್ನು, ಮನುಷ್ಯನಿಗೆ ಆನಂದ ಲಭಿಸುವ ಆಹಾರಗಳನ್ನು ಪದೇ ಪದೇ ತಿನ್ನಲು ಬಯಸುವುದು ಮನುಷ್ಯನ ಸ್ವಭಾವ. ಅದೇ ರೀತಿ, ಪವಿತ್ರ ಖುರ್‌ಆನನ್ನು ಪದೇ ಪದೇ ಓದುವ ಮತ್ತು ಅರ್ಥಮಾಡಿಕೊಳ್ಳುವ ಬಯಕೆ ನಮಗೆ ಇರಬೇಕು. ಹಾಗಾದರೆ, ಪವಿತ್ರ ಖುರ್‌ಆನಿನಿಂದ ನಮಗೆ ಮಾತ್ರವಲ್ಲ ನಮ್ಮ ಮಕ್ಕಳಿಗೂ ಮತ್ತು ನಮ್ಮ ಸುತ್ತಮುತ್ತಲಿನ ಜನರಿಗೂ ಪ್ರಯೋಜನ ಲಭಿಸುವುದು. ಒಟ್ಟಿನಲ್ಲಿ, ಅಂಥವರೇ ತಖ್ವದಲ್ಲಿ ಅಭಿವೃದ್ಧಿ ಹೊಂದುವವರು, ಅದನ್ನು ಪಾಲಿಸುವವರು, ಮಾರ್ಗದರ್ಶನವನ್ನು ಪಡೆಯುವವರು ಮತ್ತು ಅವರು ಲೋಕಕ್ಕೆ ಪ್ರಯೋಜನಕಾರಿಯಾದ ಜನರಾಗುತ್ತಾರೆ. ಜಗತ್ತು ಅವರಿಂದ ಪ್ರಯೋಜನ ಪಡೆಯುತ್ತದೆ. ಅವರು ಸ್ವತಃ ಶಾಂತಿಯುತ ಜೀವನವನ್ನು ನಡೆಸುತ್ತಾರೆ ಮತ್ತು ಪ್ರಪಂಚಕ್ಕೆ ಶಾಂತಿ ಮತ್ತು ನೆಮ್ಮದಿಯನ್ನು ನೀಡುತ್ತಾರೆ. ಅಂತಹ ತಂದೆತಾಯಂದಿರು ನಿಜವಾಗಿಯೂ ತಮ್ಮ ಮಕ್ಕಳ ಹಕ್ಕುಗಳನ್ನು ಪೂರೈಸುವವರಾಗುತ್ತಾರೆ. ಅವರು ತಮ್ಮ ನೆರೆಹೊರೆಯವರ ಹಕ್ಕುಗಳನ್ನು ಪೂರೈಸುವವರಾಗಿರುತ್ತಾರೆ, ಅವರು ತಮ್ಮ ಲೌಕಿಕ ಕೆಲಸಗಳಲ್ಲಿ, ತಮ್ಮ ಆಸುಪಾಸಿನಲ್ಲಿ, ತಮ್ಮ ವಾತಾವರಣದಲ್ಲಿ ಪರಸ್ಪರ ಹಕ್ಕುಗಳನ್ನು ಪೂರೈಸುವವರಾಗಿರುತ್ತಾರೆ. ಅದೇ ರೀತಿ, ಅವರು ಜಮಾಅತಿನ ನಿಝಾಮಿನಲ್ಲಿಯೂ ಅದರ ವ್ಯವಸ್ಥೆಯಲ್ಲಿಯೂ ಜಮಾಅತಿಗೆ ಸೇವೆ ಸಲ್ಲಿಸುವ ಮೂಲಕ ತಮ್ಮ ಹಕ್ಕುಗಳನ್ನು ಪೂರೈಸುವವರಾಗಿರುತ್ತಾರೆ. ಏಕೆಂದರೆ ಅವರು ಪವಿತ್ರ ಖುರ್‌ಆನ್ ನೀಡಿದ ಮಾರ್ಗದರ್ಶನಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವವರಾಗಿರುತ್ತಾರೆ. ಅವರು ಆರಾಧನೆಯ ಹಕ್ಕುಗಳನ್ನು ಸಹ ಪೂರೈಸುತ್ತಾರೆ ಮತ್ತು ನಾನು ಹೇಳಿದಂತೆ, ಅಂತಹ ತಂದೆತಾಯಂದಿರು ಮಕ್ಕಳ ಮುಂದೆ ಮಾದರಿಯಾಗುವಾಗ ಮಕ್ಕಳು ಅವರನ್ನು ರೋಲ್ ಮಾಡಲ್ ಆಗಿ, ಮಾದರಿಯಾಗಿ ಪರಿಗಣಿಸುತ್ತಾರೆ. ಅದೇ ರೀತಿಯಲ್ಲಿ ಅವರ ಹೆಂಡತಿಯರು ಅವರನ್ನು ಮಾದರಿಯಾಗಿ ಪರಿಗಣಿಸುತ್ತಾರೆ. ಆಗ ಮನೆಗಳಲ್ಲಿ ಧಾರ್ಮಿಕ ಮತ್ತು ಸದ್ಗುಣಶೀಲದ ಉತ್ತಮ ವಾತಾವರಣವು ಸೃಷ್ಟಿಯಾಗುತ್ತದೆ. ಅಲ್ಲಿ ಅಲ್ಲಾಹನ ಅನುಗ್ರಹಗಳ ಮಳೆ ನಿರಂತರವಾಗಿ ಸುರಿಯುತ್ತದೆ.

ಆದ್ದರಿಂದ, ಅಲ್ಲಾಹನು ಹೇಳಿದಂತೆ ಪವಿತ್ರ ಖುರ್‌ಆನಿನ ಬೋಧನೆಗಳನ್ನು ಪಾಲಿಸುವುದರಿಂದ ಮಾರ್ಗದರ್ಶನ ಸಿಗುತ್ತದೆ. ಮಾರ್ಗದರ್ಶನ ಸಿಗುವಾಗ, ನಿಮ್ಮ ಜೀವನದಲ್ಲಿ ಪರಿವರ್ತನೆಯನ್ನು ಉಂಟುಮಾಡುವಂತಹ ಸ್ಪಷ್ಟವಾದ ವ್ಯತ್ಯಾಸವನ್ನು ನೀವು ನೋಡುವಿರಿ. ಇದನ್ನು ಅಲ್ಲಾಹನು ಹೇಳುತ್ತಾನೆ. ಆದ್ದರಿಂದ, ನಾವು ಅದನ್ನು ಓದುವುದಕ್ಕೆ, ಅರ್ಥಮಾಡಿಕೊಳ್ಳುವುದಕ್ಕೆ ಮತ್ತು ಕಾರ್ಯಗತಗೊಳಿಸುವುದಕ್ಕೆ, ಅದರ ಪ್ರಕಾರ ನಡೆಯುವುದಕ್ಕೆ ಹೆಚ್ಚು ಗಮನ ನೀಡಬೇಕು. ಮನೆಯಲ್ಲಿ ನಿಯಮಿತವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡದ, ಅದರ ಅನುವಾದವನ್ನು ಓದದ, ಅದರ ಬಗ್ಗೆ ಚಿಂತಿಸದ, ಆದರೆ ಜನರು ಹೇಳುವುದನ್ನು ಕೇಳುವಾಗ, ಹಝ್ರತ್ ಪೈಗಂಬರ್(ಸ) ಹದೀಸಿನಲ್ಲಿ ಹೇಳಿದಂತೆ, ಒಬ್ಬ ವ್ಯಕ್ತಿಯು ಜನರು ಪವಿತ್ರ ಖುರ್‌ಆನಿನ ಕುರಿತು ಹೇಳುವುದನ್ನು ಕೇಳುವಾಗ, ದರ್ಸ್‌ಗಳಲ್ಲಿ ಪವಿತ್ರ ಖುರ್‌ಆನನ್ನು ಕೇಳುವಾಗ, ಭಾಷಣಗಳಲ್ಲಿ ಕೇಳುವಾಗ, ಪವಿತ್ರ ಖುರ್‌ಆನಿನ ವಚನಗಳ, ಸೂಕ್ತಗಳ ವಿವರಣೆ ಅಥವಾ ಆಜ್ಞೆಗಳನ್ನು ಜಮಾಅತಿನ ಕಡೆಯಿಂದ ವಿವಿಧ ಸಮಯಗಳಲ್ಲಿ ನೀಡಲಾಗುವಾಗ ಆ ಬೋಧನೆಗಳ ಬೆಳಕಿನಲ್ಲಿ ಆ ವ್ಯಕ್ತಿ ಅವುಗಳನ್ನು ಪಾಲಿಸಲು ಪ್ರಯತ್ನಿಸುವಾಗ, ಇವು ಪವಿತ್ರ ಖುರ್‌ಆನಿನ ಆಜ್ಞೆಗಳೆಂದು ಅರಿತುಕೊಂಡು ಅವುಗಳನ್ನು ಅನುಸರಿಸಲು ಪ್ರಯತ್ನಿಸುವಾಗ, ಆತ ಪವಿತ್ರ ಖುರ್‌ಆನ್ ಪಾರಾಯಣ ಮಾಡುವ ಆನಂದವನ್ನು ಪಡೆಯುವುದಿಲ್ಲವಾದರೂ ಆತ ಆ ಪರಿಮಳದಿಂದ ಸ್ವಲ್ಪ ಮಟ್ಟಿಗೆ ಪ್ರಯೋಜನವನ್ನು ಪಡೆಯುತ್ತಾನೆ. ಆದರೆ ತೋರಿಕೆಗಾಗಿ ಓದುವವನು, ಅದನ್ನು ಪಾಲಿಸದವನು ಅದರಿಂದ ಯಾವುದೇ ಪ್ರಯೋಜನವನ್ನು ಪಡೆಯುವುದಿಲ್ಲ. ಪವಿತ್ರ ಖುರ್‌ಆನನ್ನು ಓದದ ಮತ್ತು ಅದರ ಪ್ರಕಾರ ನಡೆಯದ ವ್ಯಕ್ತಿಯ ಜೀವನವು ಅತ್ಯಂತ ಕಪಟತನದ ಜೀವನವಾಗಿದೆ. ಅವನು "ನಾನು ಮುಸ್ಲಿಂ" ಎಂದು ಬಾಯಿಯಿಂದ ಹೇಳುತ್ತಾನೆ, ಆದರೆ ಇಸ್ಲಾಮಿನ ಬೋಧನೆಗಳನ್ನು ಪಾಲಿಸುವುದಿಲ್ಲ, ಏಕೆಂದರೆ ಪವಿತ್ರ ಖುರ್‌ಆನಿನ ಜ್ಞಾನವನ್ನು ಪಡೆಯದೆ ಇಸ್ಲಾಮಿನ ಬೋಧನೆಗಳನ್ನು ಪಾಲಿಸಲು ಸಾಧ್ಯವಲ್ಲ. ಪವಿತ್ರ ಖುರ್‌ಆನಿನ ಆಜ್ಞೆಗಳ ಕುರಿತು ಚಿಂತಿಸದೆ ಸಾಧ್ಯವಿಲ್ಲ.

ಆದ್ದರಿಂದ ಇದಕ್ಕೆ ಬಹಳ ಪ್ರಾಮುಖ್ಯವನ್ನು ನೀಡಬೇಕು. ನಾವು ಪವಿತ್ರ ಖುರ್‌ಆನನ್ನು ಓದಬೇಕು ಮತ್ತು ಅದನ್ನು ಪಾಲಿಸಬೇಕು, ಹಾಗಾದರೆ ನಾವು ಪರಿಮಳವನ್ನು ಪಡೆಯುವವರಾಗುವೆವು ಮತ್ತು ಆ ಪರಿಮಳವನ್ನು ಹರಡುವವರಾಗುವೆವು. ಹಝ್ರತ್ ಅನಸ್(ರ) ವರದಿ ಮಾಡಿದ ಒಂದು ಹದೀಸ್ ಇದೆ. ರಸೂಲುಲ್ಲಾಹ್(ಸ) ಹೇಳಿದರು: "ಜನರಲ್ಲಿ ಕೆಲವರು ಅಹ್ಲುಲ್ಲಾಹ್ (ಅಲ್ಲಾಹನ ಜನರು) ಆಗಿರುತ್ತಾರೆ" ವರದಿಗಾರ ಹೇಳುತ್ತಾರೆ, ನಾವು ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದೆವು, "ಯಾ ರಸೂಲುಲ್ಲಾಹ್, ಅಹ್ಲುಲ್ಲಾಹ್ ಯಾರು? ಅಲ್ಲಾಹನ ಜನರು ಯಾರು?" ಹಝ್ರತ್ ಪೈಗಂಬರ್(ಸ) ಹೇಳಿದರು: ಅಹ್ಲುಲ್ಲಾಹ್ ಪವಿತ್ರ ಖುರ್‌ಆನಿನ ಜನರಾಗಿದ್ದಾರೆ, ಅವರು ಅಲ್ಲಾಹನ ವಿಶೇಷ ಜನರು ಆಗಿರುತ್ತಾರೆ. ಅಂದರೆ ಪವಿತ್ರ ಖುರ್‌ಆನನ್ನು ಓದುವವರು ಮತ್ತು ಅದನ್ನು ಪಾಲಿಸುವವರು, ಅನುಸರಿಸುವವರು ಕಾರ್ಯಗತಗೊಳಿಸುವವರು ಅಹ್ಲುಲ್ಲಾಹ್ ಆಗಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾರೆ. (ಸುನನ್ ಇಬ್ನೆ ಮಾಜ ಅಬ್ವಾಬ್ ಕಿತಾಬುಸ್ಸನ......., ಹದೀಸ್-215)

ಹಝ್ರತ್ ಮಸೀಹ್ ಮೌಊದ್ ಅಲೈಸಲಾಮ್ ಹೇಳುತ್ತಾರೆ:

"ಪವಿತ್ರ ಖುರ್‌ಆನಿನ ಪ್ರಕಾರ ನಡೆಯುವವರು ಮಾತ್ರ ಯಶಸ್ವಿಯಾಗುತ್ತಾರೆ. ಪವಿತ್ರ ಖುರ್‌ಆನನ್ನು ತ್ಯಜಿಸಿ, ಅದನ್ನು ಬಿಟ್ಟುಕೊಂಡು ಯಶಸ್ಸು ಅಸಾಧ್ಯ ಮತ್ತು ಕಷ್ಟಕರವಾಗಿದೆ."

ನಾನು ಹಿಂದಿನ ಕೆಲವು ಖುತ್ಬಗಳಲ್ಲಿ ಪವಿತ್ರ ಖುರ್‌ಆನ್ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ)ರ ಅನೇಕ ಉಲ್ಲೇಖಗಳನ್ನು ಪ್ರಸ್ತಾಪಿಸಿದ್ದೆ. ಕೆಲವು ಖುತ್ಬಗಳ ಒಂದು ಪರಂಪರೆ ಇತ್ತು. ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಉಪದೇಶಿಸಿದ ವಿಷಯಗಳನ್ನು ಬಹಳ ವಿಶದವಾಗಿ ವಿವರಿಸಲಾಗಿತ್ತು. ಇಲ್ಲೂ ನಾನು ಅದನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇನೆ. ಪವಿತ್ರ ಖುರ್‌ಆನ್ ಇಲ್ಲದೆ ಯಶಸ್ಸನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ. ನೀವು ಮುಸ್ಲಿಂ ಎಂದು ಹೇಳಿಕೊಂಡು ನಿಮ್ಮ ಕೈಯಲ್ಲಿ ಪವಿತ್ರ ಖುರ್‌ಆನ್ ಇಲ್ಲದಿದ್ದರೆ, ಎಂದರೆ ಪವಿತ್ರ ಖುರ್‌ಆನನ್ನು ಪಾಲಿಸದೆ ಇರುವುದಾದರೆ ನೀವು ಮುಸ್ಲಿಂ ಆಗಿದ್ದರೂ ಯಾವುದೇ ಯಶಸ್ಸನ್ನು ಸಾಧಿಸಲು ಸಾಧ್ಯವಿಲ್ಲ.

ಆದ್ದರಿಂದ ಪ್ರತಿಯೊಬ್ಬ ಅಹ್ಮದಿಯೂ ತಮ್ಮ ಯಶಸ್ಸನ್ನು ಸಾಧಿಸಲು ಈ ಸೂತ್ರವನ್ನು ಪರೀಕ್ಷಿಸಬೇಕು, ಇದರಿಂದ ದೀನ್ ಮತ್ತು ಲೌಕಿಕ

ಸಾಮಾನುಗಳು ಎರಡನ್ನೂ ಪಡೆಯಬಹುದು. ಇತ್ತೀಚಿನ ದಿನಗಳಲ್ಲಿ ಮುಸ್ಲಿಮರಲ್ಲಿನ ಜಗಳಗಳು, ಗಲಭೆಗಳು, ಪರಸ್ಪರರ ತಲೆಗಳನ್ನು ಕಡಿಯುವುದು, ಪರಸ್ಪರ ಆರೋಪಗಳನ್ನು ಮಾಡುವುದು, ಸರ್ಕಾರಗಳು ಜನರೊಂದಿಗೆ ಹೋರಾಡುವುದು, ಜನರು ಸರ್ಕಾರಗಳೊಂದಿಗೆ ಹೋರಾಡುವುದು, ಪರಸ್ಪರ ಕೊಲೆಗಳು, ದಂಗೆಗಳು ನಡೆಯುತ್ತಿವೆ. ಇವೆಲ್ಲವೂ ಪವಿತ್ರ ಖುರ್‌ಆನನ್ನು ಪಾಲಿಸದಿರುವ ಕಾರಣದಿಂದಾಗಿವೆ. ಹೇಳುವುದಕ್ಕೆ ಉಭಯ ಪಕ್ಷಗಳ ಕೈಗಳಲ್ಲೂ ಪವಿತ್ರ ಖುರ್‌ಆನ್ ಇದೆ. ಆದರೆ ಇಬ್ಬರೂ ಪವಿತ್ರ ಖುರ್‌ಆನಿನ ಬೋಧನೆಗಳಿಂದ ದೂರವಿದ್ದಾರೆ. ಅವರು ಪವಿತ್ರ ಖುರ್‌ಆನನ್ನು ಕಾರ್ಯಗತಗೊಳಿಸುತ್ತಿದ್ದರೆ, ಈ ವಿಷಯಗಳು ಖಂಡಿತವಾಗಿಯೂ ಸಂಭವಿಸುತ್ತಿರಲಿಲ್ಲ. ಈ ಯುಗದಲ್ಲಿ ಅಲ್ಲಾಹನು ಕಳುಹಿಸಿದ ತನ್ನ ಪ್ರತಿನಿಧಿಯನ್ನು ಅವರು ನಿರಾಕರಿಸುತ್ತಿದ್ದಾರೆ, ಅವರನ್ನು ನಂಬಲು ಸಿದ್ಧರಿಲ್ಲ, ಆದ್ದರಿಂದ ಇಂತಹ ಸ್ಥಿತಿಯಲ್ಲಿ ಪವಿತ್ರ ಖುರ್‌ಆನಿನಿಂದ ಯಾವುದೇ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೆನಪಿಡಿರಿ, ಪವಿತ್ರ ಖುರ್‌ಆನ್ ನಿಜವಾದ ಅನುಗ್ರಹಗಳ ಮೂಲ ಮತ್ತು ಮೋಕ್ಷದ ನೈಜ ಮಾರ್ಗವಾಗಿದೆ. ಪವಿತ್ರ ಖುರ್‌ಆನನ್ನು ಪಾಲಿಸದೇ ಇರುವುದು ಜನರ ತಪ್ಪಾಗಿದೆ. ಅದರ ಪ್ರಕಾರ ನಡೆಯದವರಲ್ಲಿ ಒಂದು ಗುಂಪು ಅದರ ಮೇಲೆ ನಂಬಿಕೆಯನ್ನೇ ಹೊಂದಿಲ್ಲ ಮತ್ತು ಅದನ್ನು ಅಲ್ಲಾಹನ ವಚನವೆಂದು ಪರಿಗಣಿಸುವುದಿಲ್ಲ. ಈ ಜನರು ಬಹಳ ದೂರಕ್ಕೆ ಸಾಗಿದ್ದಾರೆ. ಆದರೆ ಅದನ್ನು ಅಲ್ಲಾಹನ ವಚನ ಮತ್ತು ಮೋಕ್ಷಕ್ಕೆ ಬೇಕಾಗಿರುವ ಶಮನದಾಯಕ ಔಷಧಿ ಎಂದು ನಂಬುವವರು ಅದನ್ನು ಪಾಲಿಸದಿದ್ದರೆ, ಅದು ಎಷ್ಟು ಆಶ್ಚರ್ಯಕರ ಮತ್ತು ದುಃಖಕರವಾದ ಸಂಗತಿಯಾಗಿದೆ. ಅವರಲ್ಲಿ ಅನೇಕರು ತಮ್ಮ ಜೀವನದಲ್ಲಿ ಅದನ್ನು ಎಂದಿಗೂ ಓದಿಲ್ಲ. ಆದ್ದರಿಂದ, ಅಲ್ಲಾಹನ ವಚನದ ಬಗ್ಗೆ ಅಂತಹ ನಿರ್ಲಕ್ಷ್ಯ ಮತ್ತು ಅಸಡ್ಡೆ ಹೊಂದಿರುವವರ ಉದಾಹರಣೆಯೆಂದರೆ, ಒಂದು ಕಾರಂಜಿಯು ಶುದ್ಧ, ಸಿಹಿ ಮತ್ತು ತಂಪಾಗಿದೆ ಮತ್ತು ಅದರ ನೀರು ಅನೇಕ ರೋಗಗಳಿಗೆ ಅಮೃತ ಮತ್ತು ಗುಣಕರ ಎಂದು ಒಬ್ಬ ವ್ಯಕ್ತಿಗೆ ಗೊತ್ತಿದ್ದೂ ಆತನಿಗೆ ಇದು ಖಚಿತವಾಗಿ ಗೊತ್ತಿದ್ದೂ ಕೂಡ, ಆತನಿಗೆ ಬಾಯಾರಿಕೆ ಇದ್ದೂ ಕೂಡ ಮತ್ತು ಅನೇಕ ರೋಗಗಳಿಂದ ಬಳಲುತ್ತಿದ್ದರೂ, ಅದರ ಬಳಿಗೆ ಹೋಗದೇ ಇರುವವನಂತೆ ಆಗಿರುತ್ತಾನೆ. ಇದು ಎಂತಹ ದೌರ್ಭಾಗ್ಯ ಮತ್ತು ಅಜ್ಞಾನ? ಆತ ಆ ಚಿಲುಮೆಗೆ ಬಾಯಿ ಇಟ್ಟು ತೃಪ್ತಿಪಡಬೇಕಾಗಿತ್ತು ಮತ್ತು ಅದರ ಆಹ್ಲಾದಕರ ಮತ್ತು ಗುಣಕರವಾದ ನೀರಿನಿಂದ ಆನಂದಿಸಬೇಕಾಗಿತ್ತು. ಆದರೆ ಈ ಅರಿವಿನ ಹೊರತಾಗಿಯೂ, ಆತ ಅಜ್ಞಾನಿಯಂತೆ ಅದರಿಂದ ದೂರವಿರುತ್ತಾನೆ ಮತ್ತು ಅವನು ಸಾಯುವವರೆಗೂ ಅದರಿಂದ ದೂರವಿರುತ್ತಾನೆ. ಕೆಲವರಿಗೆ ಜೀವನದ ಕೊನೆಯವರೆಗೂ, ಪವಿತ್ರ ಖುರ್‌ಆನಿನ ಅನುಗ್ರಹಗಳು ಏನೆಂದು ತಿಳಿದಿರುವುದಿಲ್ಲ. ಅಂತಹ ವ್ಯಕ್ತಿಯ ಸ್ಥಿತಿಯು ತುಂಬಾ ಹೀನಾಯ ಮತ್ತು ನಮಗೆ ಪಾಠ ನೀಡುವಂತಹದ್ದು ಆಗಿದೆ. ಮುಸ್ಲಿಮರ ಸ್ಥಿತಿಯು ಈಗ ಹಾಗೆಯೇ ಆಗುತ್ತಿದೆ. ಎಲ್ಲ ಯಶಸ್ಸಿಗೆ ನಾವು ಪಾಲಿಸಬೇಕಾದದ್ದು ಪವಿತ್ರ ಖುರ್‌ಆನನ್ನು ಆಗಿದೆ ಎಂದು ಅವರಿಗೆ ಗೊತ್ತಿದೆ. ಆದರೆ ಅವರಿಗೆ ಅದರ ಬಗ್ಗೆ ಚಿಂತೆಯಿಲ್ಲ. ಗೊತ್ತಿದ್ದೂ ಕೂಡ ಅವರಿಗೆ ಪವಿತ್ರ ಖುರ್‌ಆನಿನ ಆಜ್ಞೆಗಳ ಬಗ್ಗೆ ಪರಿವೆಯಿಲ್ಲ, ಗಮನವಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಬ್ಬ ವ್ಯಕ್ತಿ ತುಂಬಾ ಸಹಾನುಭೂತಿ ಮತ್ತು ಹಿತೈಷಿಯಾಗಿ, ಹಝ್ರತ್ ಮಸೀಹ್ ಮೌಊದ್(ಅ) ತನ್ನ ಸ್ವಂತ ಉದಾಹರಣೆಯನ್ನು ನೀಡುತ್ತಾ ಹೇಳುತ್ತಿದ್ದಾರೆ. ನಾನು ನಿಮ್ಮನ್ನು ಸಹಾನುಭೂತಿ ಮತ್ತು ಹಿತೈಷಿಯಾಗಿ ಕರೆಯುತ್ತಿದ್ದೇನೆ. ನನಗೆ ಇರುವ ಸಹಾನುಭೂತಿಯಿಂದ ಮಾತ್ರವಲ್ಲ, ಅಲ್ಲಾಹನ ಆಜ್ಞೆ ಮತ್ತು ನಂಬಿಕೆಯೊಂದಿಗೆ ನಿಮ್ಮನ್ನು ಕರೆಯುತ್ತಿದ್ದೇನೆ. ಆಗ ಅಂತಹ ವ್ಯಕ್ತಿಯನ್ನು ಸುಳ್ಳುಗಾರ ಮತ್ತು ದಜ್ಜಾಲ್ ಎಂದು ಕರೆಯಲಾಗುತ್ತಿದೆ. ಈ ಸಮುದಾಯಕ್ಕೆ ಇದಕ್ಕಿಂತ ಹೆಚ್ಚಿನ ದಯನೀಯ ಅವಸ್ಥೆ ಏನಾಗಿರಲು ಸಾಧ್ಯ?
(ಮಲ್‌ಫೂಝಾತ್, ಸಂಪುಟ-7, ಪುಟ-181-182, 1984)

ಈಗಲಾದರೂ ಮುಸ್ಲಿಮರು ಈ ಚಿಲುಮೆಯನ್ನು ಮಹತ್ತಾದ ಅನುಗ್ರಹವೆಂದು ಪರಿಗಣಿಸುವುದು ಮತ್ತು ಅದನ್ನು ಗೌರವಿಸುವುದು ಅಗತ್ಯ. ಅದನ್ನು ಗೌರವಿಸುವುದು ಎಂದರೆ ಅದರ ಪ್ರಕಾರ ನಡೆಯುವುದಾಗಿದೆ. ಹಾಗಾದರೆ ಅವರ ಸಮಸ್ಯೆಗಳನ್ನು ಮತ್ತು ಕಷ್ಟಗಳನ್ನು ಅಲ್ಲಾಹನು ಹೇಗೆ ನಿವಾರಿಸುತ್ತಾನೆ ಎಂಬುದನ್ನು ಅವರು ನೋಡುವರು.

ಮುಸ್ಲಿಮರು ಇದನ್ನು ತಿಳಿಯುವುದಾದರೆ ಮತ್ತು ಈ ಕುರಿತು ಯೋಚಿಸುವುದಾದರೆ ಎಷ್ಟು ಚೆನ್ನಾಗಿತ್ತು. ಅಲ್ಲಾಹನು ಅವರಿಗಾಗಿ ಒಂದು ಉತ್ತಮ ಮಾರ್ಗವನ್ನು ತೆರೆದಿದ್ದಾನೆ. ಅವರು ಈ ಮಾರ್ಗದಲ್ಲಿ ನಡೆದುಕೊಂಡು ಪ್ರಯೋಜನ ಪಡೆಯುವುದಾದರೆ ಎಷ್ಟು ಚೆನ್ನ! ಒಟ್ಟಿನಲ್ಲಿ, ನಾನು ಮೊದಲೇ ಹೇಳಿದಂತೆ, ಮುಸ್ಲಿಮರಲ್ಲಿ ಎಲ್ಲ ಕೆಟ್ಟ ಸಂಗತಿಗಳು ಉಂಟಾಗುತ್ತಿವೆ. ಏಕೆಂದರೆ ಅವರು ನಂಬುತ್ತಿಲ್ಲ ಮತ್ತು ಪವಿತ್ರ ಖುರ್‌ಆನನ್ನು ಪಾಲಿಸುವುದಿಲ್ಲ. ಪವಿತ್ರ ಖುರ್‌ಆನನ್ನು ತ್ಯಜಿಸಿದ್ದಾರೆ. ಅವರು ಹೆಸರಿಗೆ ವಾದಿಸುತ್ತಾರೆ ಮತ್ತು ಕೇವಲ ಕೈಯಲ್ಲಿ ಹಿಡಿದುಕೊಂಡಿದ್ದಾರೆ. ಅದರ ಪ್ರಕಾರ ನಡೆಯುವುದನ್ನು ಬಿಟ್ಟುಕೊಂಡಿದ್ದಾರೆ. ಅಹ್ಮದಿಯರಿಗೆ ಪವಿತ್ರ ಖುರ್‌ಆನನ್ನು ನಿಷೇಧಿಸಲಾಗಿದೆ. ಅವರು ಅದನ್ನು ಓದಬಾರದು ಎಂದು ಹೇಳುತ್ತಾರೆ. ಪಾಕಿಸ್ತಾನದಲ್ಲಿ ಅಹ್ಮದಿಯರಿಗೆ ಪವಿತ್ರ ಖುರ್‌ಆನ್ ಓದುವುದನ್ನು ನಿಷೇಧಿಸಲಾಗಿದೆ. ಈ ಎದುರಾಳಿಗಳು ಸ್ವತಃ ಅದನ್ನು ಪಾಲಿಸುವುದಿಲ್ಲ. ಅವರಿಗೆ ನಮ್ಮ ಹೃದಯಗಳಿಂದ ಪವಿತ್ರ ಖುರ್‌ಆನಿನ ಬೋಧನೆಗಳನ್ನು ತೆಗೆದುಹಾಕಲು ಸಾಧ್ಯವಲ್ಲ, ಅವರು ಎಷ್ಟೇ ಪ್ರಯತ್ನಿಸಿದರೂ, ಅವರು ನಮ್ಮ ಹೃದಯಗಳಿಂದ ಅದರ ಪ್ರೀತಿಯನ್ನು ತೆಗೆದುಹಾಕಲು ಸಾಧ್ಯವಿಲ್ಲ.

ಆದ್ದರಿಂದ, ಅಹ್ಮದಿಯರು ಈ ಕುರಿತು ವಿಶೇಷ ಗಮನ ನೀಡಬೇಕು. ಪವಿತ್ರ ಖುರ್‌ಆನಿನ ಬೋಧನೆಗಳನ್ನು ಮರೆತ ಮತ್ತು ತ್ಯಜಿಸಿದ ಕಾರಣದಿಂದ ಮತ್ತು ಅದನ್ನು ತಿಳಿಸಿಕೊಡುವವರ ಮಾತನ್ನು ಅರ್ಥಮಾಡಿಕೊಳ್ಳದ ಕಾರಣದಿಂದಾಗಿ ಮುಸ್ಲಿಮರ ಸ್ಥಿತಿ ಹೇಗಿದೆ ಎಂದು ನಾವು ನೋಡುತ್ತಿದ್ದೇವೆ. ಎಲ್ಲೆಡೆ ಅಶಾಂತಿ ಮತ್ತು ಅಸಮಾಧಾನದ ಸ್ಥಿತಿ ಇದೆ. ಈ ಜನರು ಚಿಂತಿಸಬೇಕು ಮತ್ತು ಯೋಚಿಸಬೇಕು. ಪವಿತ್ರ ಖುರ್‌ಆನನ್ನು ಮಾರ್ಗದರ್ಶನದ ಮೂಲವೆಂದು ಪರಿಗಣಿಸುವುದಾದರೆ, ಅದರ ಆಜ್ಞೆಗಳನ್ನು ಪಾಲಿಸುವುದು ಕೂಡ ಅವಶ್ಯಕವಾಗುವುದು.

ಹಝ್ರತ್ ಸುಹೈಬ್(ರ)ರಿಂದ ಹೀಗೆ ವರದಿಯಾಗಿದೆ, ಹಝ್ರತ್ ಪೈಗಂಬರ್(ಸ) ಹೇಳಿದರು: ಪವಿತ್ರ ಖುರ್‌ಆನ್ ನಿಷೇಧಿಸಿದ್ದನ್ನು ಅನುಮತನೀಯವೆಂದು ಪರಿಗಣಿಸುವವನಿಗೆ ಪವಿತ್ರ ಖುರ್‌ಆನ್ ಮೇಲೆ ಯಾವುದೇ ನಂಬಿಕೆಯಿಲ್ಲ. (ಸುನನ್ ಅತ್ತಿರ್ಮಿಧಿ, ಕಿತಾಬ್ ಫಝಾಎಲುಲ್ ಖುರ್‌ಆನ್, ಹದೀಸ್-2918)

ಅಂದರೆ, ಅಲ್ಲಾಹನು ನಿಷೇಧಿಸಿದ ವಿಷಯಗಳ ಬಗ್ಗೆ ಅಸಡ್ಡೆ ತೋರಿಸಿದರೆ, ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪಾಲಿಸದಿದ್ದರೆ, ಅಂತಹ ವ್ಯಕ್ತಿಯು ನಾನು ಮುಸ್ಲಿಮನಾಗಿದ್ದೇನೆ ಅಲ್ಹಮ್ದುಲಿಲ್ಲಾಹ್ ಎಂದು ಒಂದು ಲಕ್ಷ ಬಾರಿ ಹೇಳಿದರೂ, ಅವನ ನಂಬಿಕೆಯು ಕೇವಲ ಟೊಳ್ಳಾದ ನಂಬಿಕೆಯಾಗಿದೆ. ಕೇವಲ ಘೋಷಣೆ ಮಾತ್ರವಾಗಿದೆ. ಅಲ್ಲಾಹನು ಅದರ ಪರಿವೆ ಮಾಡುವುದಿಲ್ಲ. ಅಂತಹ ಜನರು ಇತರರಿಗೆ ಹಾನಿ ಮಾಡುತ್ತಿರುತ್ತಾರೆ, ಏಕೆಂದರೆ ಅವರು ಅಲ್ಲಾಹನಿಂದ ದೂರವಿರುತ್ತಾರೆ, ಅವರು ಜನರ ಹಕ್ಕುಗಳನ್ನು ಕಸಿದುಕೊಳ್ಳುತ್ತಿರುತ್ತಾರೆ, ನಾನು ಉದಾಹರಣೆ ನೀಡಿದಂತೆ, ಇತ್ತೀಚಿನ ದಿನಗಳಲ್ಲಿ ಲೋಕದಲ್ಲಿ ಮುಸ್ಲಿಮರ ಸ್ಥಿತಿ ಇದೇ ಆಗಿದೆ. ಅರಸರು, ನಾಯಕರು, ವಿವಿಧ ಪಂಗಡಗಳ ಜನರು ಪರಸ್ಪರ ಹೋರಾಡುತ್ತಿದ್ದಾರೆ. ಮುಸ್ಲಿಮರು ಪರಸ್ಪರರನ್ನು ಕೊಲ್ಲುತ್ತಿದ್ದಾರೆ, ಆದ್ದರಿಂದ, ಇದರಿಂದ ರಕ್ಷಣೆ ಪಡೆಯಲು ಈ ಜನರು ಪವಿತ್ರ ಖುರ್‌ಆನಿನ ಸರಿಯಾದ ಮಾರ್ಗದರ್ಶನವನ್ನು ಪಡೆಯುವುದು ಅವಶ್ಯಕ. ಆದ್ದರಿಂದ ಈ ಕಾಲದಲ್ಲಿ ಅತ್ಯಂತ ದೊಡ್ಡ ಕರ್ತವ್ಯ ಅಹ್ಮದಿಯರದ್ದಾಗಿದೆ. ಅಹ್ಮದಿ ಮುಸ್ಲಿಮರ ಕರ್ತವ್ಯವೆಂದರೆ, ಅವರು ಪವಿತ್ರ ಖುರ್‌ಆನಿನ ಪ್ರಕಾರ ನಡೆಯಬೇಕು. ಇದರಿಂದ ಇಸ್ಲಾಮೇತರ ಲೋಕದ ಜನರು ಅಹ್ಮದಿಯರ ನಡೆವಳಿಕೆಯನ್ನು ನೋಡಿ ನಿಜವಾದ ಇಸ್ಲಾಮಿನ ಬೋಧನೆಗಳು ಯಾವುವು ಮತ್ತು ಪವಿತ್ರ ಖುರ್‌ಆನಿನ ಆಜ್ಞೆಗಳು ಯಾವುವು ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಇವು ಶಾಂತಿ, ನೆಮ್ಮದಿ ಮತ್ತು ಪ್ರೀತಿಯ ಆಜ್ಞೆಗಳಾಗಿವೆ. ಇವು ಸಮಾಜದಲ್ಲಿ ಸಹೋದರತೆ ಮತ್ತು ಭ್ರಾತೃತ್ವವನ್ನು ಹರಡುವ ಆಜ್ಞೆಗಳಾಗಿವೆ. ಇವು ಮಾನವರ ಹಕ್ಕುಗಳನ್ನು ಪೂರೈಸುವ ಆಜ್ಞೆಗಳಾಗಿವೆ. ಆದ್ದರಿಂದ ಅಹ್ಮದಿಯರು ಈ ಬಗ್ಗೆ ಹೆಚ್ಚು ಗಮನ ನೀಡುವ ಅಗತ್ಯವಿದೆ.

ರಮಝಾನಿನ ತಿಂಗಳಲ್ಲಿ ಪವಿತ್ರ ಖುರ್‌ಆನನ್ನು ಓದುವಾಗ ಈ ವಿಷಯಗಳ ಬಗ್ಗೆ ಚಿಂತಿಸಿರಿ. ಅನಂತರ ಈ ಬೋಧನೆಯನ್ನು ನಿರಂತರವಾಗಿ ಸ್ಥಾಯಿಯಾಗಿ ಹರಡಲಿಕ್ಕಾಗಿ ವರ್ಷ ಪೂರ್ತಿ ಪ್ರಯತ್ನಿಸುತ್ತಾ ಇರಬೇಕು.

ಒಂದು ವರದಿಯಲ್ಲಿ ಹೀಗೆ ಬಂದಿದೆ: ಹಝ್ರತ್ ಪೈಗಂಬರ್(ಸ)ರಿಂದ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ. ಹಝ್ರತ್ ಜಿಬ್ರೀಲ್(ಅ) ಒಂದು ಬಾರಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಹೀಗೆ ಹೇಳಿದರು: ಶೀಘ್ರದಲ್ಲೇ ಅನೇಕ ಫಿತ್‌ನಗಳು (ಪಿತೂರಿಗಳು) ಉಂಟಾಗುವುದು. ಈ ಫಿತ್‌ನದಿಂದ ಮುಕ್ತಿ ಹೊಂದುವುದು ಹೇಗೆ ಎಂದು ಕೇಳಲಾದಾಗ, ಜಿಬ್ರೀಲ್(ಅ) ಹೇಳಿದರು: ಅಲ್ಲಾಹನ ಗ್ರಂಥದ ಮೂಲಕ ಈ ಪಿತೂರಿಗಳಿಂದ ಮುಕ್ತಿ ಹೊಂದಲು ಸಾಧ್ಯವಿದೆ. (ಜಾಮಿ ಅತ್ತಿರ್ಮಿಧಿ ಅಬ್ವಾಬ್ ಫಝಾಎಲುಲ್ ಖುರ್‌ಆನ್, ಹದೀಸ್-2906) (ಜಾಮಿ ಅಲ್ ಅಸೂಲ್, ಸಂಪುಟ-8, ಪುಟ-346, ದಾರುಲ್ ಕುತುಬ್

ಇಲ್‌ಮಿಯಾ ಬೈರುತ್)

ಒಟ್ಟಿನಲ್ಲಿ ನಾನು ಮೊದಲೇ ಹೇಳಿದಂತೆ ನಮ್ಮನ್ನು ಮತ್ತು ನಮ್ಮ ಮಕ್ಕಳನ್ನು ರಕ್ಷಿಸಲು ನಾವು ಅಲ್ಲಾಹನ ಗ್ರಂಥದ ಕಡೆಗೆ ಗಮನ ನೀಡುವ ಅಗತ್ಯವಿದೆ. ಆಗ ಮಾತ್ರ ನಾವು ಮಾರ್ಗದರ್ಶನವನ್ನು ಪಡೆಯಬಹುದು ಮತ್ತು ಫಿತ್‌ನಗಳಿಂದ ರಕ್ಷಣೆ ಪಡೆಯಬಹುದು ಹಾಗೂ ಅಲ್ಲಾಹನು ನಮಗಾಗಿ ಅವತೀರ್ಣಗೊಳಿಸಿದ ಆಜ್ಞೆಗಳನ್ನು ಅರ್ಥಮಾಡಿಕೊಳ್ಳಬಹುದು.

ಒಂದು ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಪವಿತ್ರ ಖುರ್‌ಆನನ್ನು ಬಹಿರಂಗವಾಗಿ ಓದುವವನು ಬಹಿರಂಗವಾಗಿ ಸದಖ (ದಾನ) ಮಾಡುವವನಂತೆ ಆಗಿರುತ್ತಾನೆ ಮತ್ತು ಪವಿತ್ರ ಖುರ್‌ಆನನ್ನು ರಹಸ್ಯವಾಗಿ ಓದುವವನು ರಹಸ್ಯವಾಗಿ ದಾನ ಮಾಡುವವನಂತೆ ಆಗಿದ್ದಾನೆ.

ವಿಪತ್ತುಗಳು, ಅಪಾಯಗಳು ಮತ್ತು ಪಿತೂರಿಗಳನ್ನು ಸದಖ ದೂರಮಾಡುತ್ತದೆ ಎಂದು ಹದೀಸ್‌ಗಳಲ್ಲಿ ಉಲ್ಲೇಖಿಸಲಾಗಿದೆ. ಆದ್ದರಿಂದ, ಪವಿತ್ರ ಖುರ್‌ಆನನ್ನು ಓದುವುದು ಮತ್ತು ಅರ್ಥವಾಗುವ ರೀತಿಯಲ್ಲಿ ಓದುವುದು ಸದಖದಂತೆ ಸ್ವೀಕರಿಸಲ್ಪಡುತ್ತದೆ ಮತ್ತು ಅದರ ಅನುಗ್ರಹದಿಂದ ಮನುಷ್ಯನು ಎಲ್ಲ ಫಿತ್‌ನಗಳಿಂದ ರಕ್ಷಿಸಲ್ಪಡುತ್ತಾನೆ ಎಂದು ನಾವು ನೆನಪಿಟ್ಟುಕೊಳ್ಳಬೇಕು.

ಇಂದು ಜಗತ್ತಿನಲ್ಲಿ ಎಲ್ಲೆಡೆ ಕೆಡುಕುಗಳು ವ್ಯಾಪಿಸಿವೆ. ಫಿತ್‌ನ, ಪಿತೂರಿ ಮತ್ತು ಗಲಭೆಗಳು ಆವರಿಸಿಕೊಂಡಿವೆ. ನಾವು ದಾನವನ್ನು ಸದಖವನ್ನು ಸಹ ನಿರಂತರವಾಗಿ ಮಾಡುತ್ತಿರಬೇಕು. ಅದೇ ರೀತಿಯಲ್ಲಿ ನಾವು ಪವಿತ್ರ ಖುರ್‌ಆನನ್ನು ಯಾವಾಗಲೂ ಓದುತ್ತಿರಬೇಕು, ಬಹಿರಂಗವಾಗಿಯೂ ಓದಬೇಕು ರಹಸ್ಯವಾಗಿಯೂ ಓದಬೇಕು. ಹೀಗೆ ಈ ವಿಪತ್ತುಗಳು ಮತ್ತು ಕಷ್ಟಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ಅಲ್ಲಾಹನು ವಿವರಿಸಿದ ಈ ಬೋಧನೆಗಳನ್ನು ಪಾಲಿಸಬೇಕು.

ಹಝ್ರತ್ ಅಬೂ ಹುರೈರಾ(ರ)ರಿಂದ ವರದಿಯಾಗಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಇಬ್ಬರು ವ್ಯಕ್ತಿಗಳ ಬಗ್ಗೆ ಮಾತ್ರ ಅಸೂಯೆ, ಅಂದರೆ ಹಾನಿ ಮಾಡುವ ಉದ್ದೇಶವಿಲ್ಲದ, ಆದರೆ ಪ್ರಶಂಸೆಯ ರೀತಿಯಲ್ಲಿರುವ ಅಸೂಯೆಗೆ ಅನುಮತಿ ಇದೆ. ಅವರು ಯಾರು ಎಂದರೆ, ಒಬ್ಬ ವ್ಯಕ್ತಿಗೆ ಅಲ್ಲಾಹನು ಪವಿತ್ರ ಖುರ್‌ಆನಿನ ಅರಿವನ್ನು ನೀಡಿದಾಗ ಅವನು ಅದನ್ನು ಹಗಲು ರಾತ್ರಿ ಓದುತ್ತಿದ್ದರೆ, ಅವನನ್ನು ನೋಡಿ ಹೀಗೆ ಅಸೂಯೆಪಡಬಹುದು. ಅವನಿಗೆ ನೀಡಲಾದದ್ದು ನನಗೆ ನೀಡಲಾಗುತ್ತಿದ್ದರೆ, ಅವನು ಏನನ್ನು ಮಾಡುತ್ತಿದ್ದಾನೋ ಅದನ್ನು ನಾನು ಕೂಡ ಮಾಡುತ್ತಿದ್ದೆ. ಇನ್ನೊಬ್ಬ ವ್ಯಕ್ತಿ ಯಾರೆಂದರೆ, ಒಬ್ಬ ವ್ಯಕ್ತಿಗೆ ಅಲ್ಲಾಹನು ಸಂಪತ್ತನ್ನು ನೀಡಿದಾಗ, ಅದನ್ನು ಖರ್ಚು ಮಾಡಬೇಕಾದಲ್ಲಿ ಖರ್ಚು ಮಾಡುತ್ತಿದ್ದರೆ. ಅಂಥವನ ಬಗ್ಗೆ ಹೀಗೆ ಅಸೂಯೆ ಪಡಬಹುದಾಗಿದೆ: ಅವನಿಗೆ ನೀಡಲಾದದ್ದು ನನಗೆ ನೀಡಲಾಗಿದ್ದರೆ ಅವನು ಏನು ಮಾಡುತ್ತಿದ್ದಾನೋ ಅದನ್ನು ನಾನು ಕೂಡ ಮಾಡುತ್ತಿದ್ದೆ, ಅಂದರೆ ಅಲ್ಲಾಹನ ಮಾರ್ಗದಲ್ಲಿ ಸಂಪತ್ತನ್ನು ಖರ್ಚು ಮಾಡುತ್ತಿದ್ದೆ. (ಸಹೀಹ್ ಬುಖಾರಿ ಕಿತಾಬ್ ಫಝಾಇಲುಲ್ ಖುರ್‌ಆನ್....... ಹದೀಸ್–5026)

ಪವಿತ್ರ ಖುರ್‌ಆನ್ ಓದುವುದಕ್ಕೆ ಕೆಲವು ಶಿಷ್ಟಾಚಾರಗಳಿವೆ. ಹೀಗೆ ಅಸೂಯೆ ಪಡುವವರು, ಅಸೂಯೆ ಪಡುವಾಗ ಪವಿತ್ರ ಖುರ್‌ಆನನ್ನು ಓದುವ ಕೆಲಸವನ್ನು ಮಾತ್ರ ಮಾಡುವುದಿಲ್ಲ. ಬದಲಾಗಿ, ದಿನರಾತ್ರಿ ಓದುತ್ತಿರುವ ವ್ಯಕ್ತಿಯು ಓದುವುದರ ಜೊತೆಗೆ ಓದುತ್ತಿರುವುದನ್ನು ಪಾಲಿಸುತ್ತಿದ್ದಾನೆ ಎಂದು ಕೇಳುಗನಿಗೆ ತಿಳಿದಿರುತ್ತದೆ. ಆಗ ಇದನ್ನು ನಾನು ಕೂಡ ಅರ್ಥಮಾಡಿಕೊಂಡಿದ್ದರೆ ಮತ್ತು ಅದರ ಪ್ರಕಾರ ನಡೆಯುತ್ತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಅವನು ಅಸೂಯೆಪಡುತ್ತಾನೆ. ಅದೇ ರೀತಿ, ಹದೀಸ್‌ನಲ್ಲಿ ಹೇಳಿರುವಂತೆ, ಸಂಪತ್ತಿನ ಬಗ್ಗೆ, ಕೆಲವರು ಚಂದಾಗಳ ಅಗತ್ಯವೇನು ಎಂದು ಕೇಳುತ್ತಾರೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿಯೇ ಆರ್ಥಿಕ ತ್ಯಾಗಗಳನ್ನು ಮಾಡಿ ಎಂದು ಹೇಳುತ್ತಾನೆ, ಅವು ಅವಶ್ಯಕ. ಆರ್ಥಿಕ ತ್ಯಾಗ ಮಾಡುವವರ ಬಗ್ಗೆ ಜನರು ಅಸೂಯೆ ಪಡಬೇಕು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾರೆ. ಆದ್ದರಿಂದ, ಇದು ಸಹ ಬಹಳ ಮುಖ್ಯವಾದ ವಿಷಯ. ಕೆಲವರ ಮನಸ್ಸಿನಲ್ಲಿ ಮೂಡುವ ಪ್ರಶ್ನೆಯೇನೆಂದರೆ ಆರ್ಥಿಕ ತ್ಯಾಗಗಳನ್ನು ಮಾಡಲು ನಮಗೆ ಏಕೆ ಹೇಳಲಾಗುತ್ತದೆ ಎಂದಾಗಿದೆ. ಅವರ ಪ್ರಶ್ನೆಗಳಿಗೆ ಇದು ಉತ್ತರವಾಗಿದೆ. ಇದು ಅಲ್ಲಾಹನ ಆಜ್ಞೆಯಾಗಿದೆ. ಹಝ್ರತ್ ಪೈಗಂಬರ್(ಸ) ಒಂದೆಡೆ ಪವಿತ್ರ ಖುರ್‌ಆನನ್ನು ಮಧುರವಾಗಿ ಮತ್ತು ಸುಂದರವಾಗಿ ಓದದವನಿಗೆ ನಮ್ಮೊಂದಿಗೆ ಯಾವುದೇ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ, ಮಧುರವಾಗಿ, ಸುಂದರವಾಗಿ, ನಿಧಾನವಾಗಿ ಓದುವುದು, ಅರ್ಥಮಾಡಿಕೊಂಡು ಓದುವುದು ಸಹ ಅವಶ್ಯಕ.
(ಸುನನ್ ಅಬೀ ದಾವೂದ್ ಕಿತಾಬುತ್ತಫ್‌ರೀ......., ಹದೀಸ್–1649)

ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೇಳುತ್ತಾರೆ: ಮನುಷ್ಯನು ಪವಿತ್ರ ಖುರ್‌ಆನನ್ನು ಬಹಳಷ್ಟು ಓದಬೇಕು, ಅದರಲ್ಲಿ ದುಆದ ಭಾಗ ಬಂದರೆ, ದುಆ ಮಾಡಬೇಕು. ಸುಂದರವಾಗಿ ಓದಬೇಕು ಎಂಬುದರ ಒಂದು ಅರ್ಥವೇನೆಂದರೆ, ಪ್ರಾರ್ಥನೆಯ ಜಾಗ ಬರುವಾಗ ಪ್ರಾರ್ಥಿಸಬೇಕು. ಆ ಪ್ರಾರ್ಥನೆಯಲ್ಲಿ ಇರುವುದನ್ನೇ ಅಲ್ಲಾಹನಿಂದ ನಾವು ಬೇಡಬೇಕು. ಪವಿತ್ರ ಖುರ್‌ಆನಿನಲ್ಲಿ ದುಆಗಳು ಬರುತ್ತವೆ, ಆದ್ದರಿಂದ ಆ ಸಂದರ್ಭಗಳಲ್ಲಿ ಆ ಪ್ರಾರ್ಥನೆಗಳಲ್ಲಿ ಅಲ್ಲಾಹನಿಂದ ಏನನ್ನು ಕೇಳಲಾಗಿದೆಯೋ ಅದಕ್ಕಾಗಿ ದುಆ ಮಾಡಬೇಕು. ಪವಿತ್ರ ಖುರ್‌ಆನಿನಲ್ಲಿ ಅನೇಕ ಪ್ರಾರ್ಥನೆಗಳಿವೆ, ಪ್ರವಾದಿಗಳು ಸಹ ದುಆ ಮಾಡಿದ್ದಾರೆ, ಆದ್ದರಿಂದ ನನಗೆ ಅದನ್ನು ನೀಡು ಎಂದು ಮಾನವನು ಸ್ವತಃ ಅಲ್ಲಾಹನೊಡನೆ ಹೇಳಬೇಕು. ಶಿಕ್ಷೆಯ ಪ್ರಸ್ತಾಪ ಬರುವಾಗ ಅದರಿಂದ ರಕ್ಷಣೆಯನ್ನು ಕೋರಬೇಕು. ಜನಾಂಗಗಳ ನಾಶಕ್ಕೆ ಕಾರಣವಾದ ಕೆಟ್ಟ ಕಾರ್ಯಗಳಿಂದ ದೂರವಿರಬೇಕು. (ಮಲ್‌ಫೂಝಾತ್, ಸಂಪುಟ–6, ಪುಟ–265–266, 1984)

ಪವಿತ್ರ ಖುರ್‌ಆನಿನಲ್ಲಿ ಆ ಜನಾಂಗಗಳ ನಾಶದ ಬಗ್ಗೆ ಉಲ್ಲೇಖವಿದೆ, ಯಾವ ಕೆಟ್ಟ ಕಾರ್ಯಗಳಿಂದಾಗಿ ಅಲ್ಲಾಹನು ಅವರನ್ನು ಹಿಡಿದನು ಎಂದು ಹೇಳಲಾಗಿದೆ. ಅಂತಹ ಪ್ರಸ್ತಾಪ ಬರುವಾಗ, ಕ್ಷಮೆಯಾಚಿಸಬೇಕು ಮತ್ತು ರಕ್ಷಣೆ ಪಡೆಯಲು ಕೂಡ ಪ್ರಯತ್ನಿಸಬೇಕು. ಹಾಗಾದರೆ ನಾವು ಅನೇಕ ಕೆಡುಕುಗಳಿಂದ ಸ್ವತಃ ರಕ್ಷಣೆ ಪಡೆಯುತ್ತಾ ಹೋಗುವೆವು.

ಇತ್ತೀಚಿನ ದಿನಗಳಲ್ಲಿ, ಈ ಪಾಶ್ಚಿಮಾತ್ಯ ವಾತಾವರಣದಲ್ಲಿ, ಅದರ ಪ್ರಭಾವದಿಂದ ನಮ್ಮ ಮನಸ್ಸಿನಲ್ಲಿಯೂ ತಪ್ಪು ರೀತಿಯ ಸಂಗತಿಗಳು ಉಂಟಾಗುತ್ತಿವೆ. ನಮ್ಮಲ್ಲಿ ಅನೇಕರು ತಪ್ಪು ರೀತಿಯ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ನಾವು ಪವಿತ್ರ ಖುರ್‌ಆನನ್ನು ಓದುವಾಗ, ಇಸ್ತಿಗ್‌ಫಾರ್ ಮಾಡುವಾಗ, ಕ್ಷಮೆಯಾಚಿಸುವಾಗ ಮತ್ತು ಕೆಡುಕುಗಳಿಂದ ರಕ್ಷಣೆ ಪಡೆಯಲು ಪ್ರಯತ್ನಿಸುವಾಗ ನಮ್ಮ ಜೀವನವು ಸುಂದರವಾಗುವುದು. ನಾವು ಆ ಕೆಡುಕುಗಳಿಂದ ರಕ್ಷಣೆ ಪಡೆಯುವವರಾಗುವೆವು. ಸಮುದಾಯಗಳ ನಾಶಕ್ಕೆ ಕಾರಣವಾದ ಕೆಟ್ಟ ಕಾರ್ಯಗಳಿಂದ ದೂರವಿರಬೇಕು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅವರು ಹೇಳುತ್ತಾರೆ:

ದಿವ್ಯವಾಣಿಯ ಸಹಾಯವಿಲ್ಲದೆ, ಅಲ್ಲಾಹನ ಗ್ರಂಥದೊಂದಿಗೆ ಹೊಂದಿಕೆಯಾಗುವ ಬಾಹ್ಯವಾದ ಯೋಜನೆಯು ವ್ಯಕ್ತಿಯ ಅಭಿಪ್ರಾಯವಾಗಿರುತ್ತದೆ. ಅದು ಕೆಲವೊಮ್ಮೆ ತಪ್ಪು ಆಗಿರಬಹುದು. ಹದೀಸ್‌ಗಳಿಗೆ ವಿರುದ್ಧವಾಗಿರುವ ಅಭಿಪ್ರಾಯವು ನವೀನಾಚಾರದಲ್ಲಿ ಸೇರಿಕೊಳ್ಳುತ್ತದೆ. ಸಂಪ್ರದಾಯಗಳು ಮತ್ತು ನವೀನಾಚಾರಗಳಿಂದ ರಕ್ಷಣೆ ಪಡೆಯಬೇಕು, ಏಕೆಂದರೆ ಇದರಿಂದ ಕ್ರಮೇಣ ಶರೀಅತ್‌ನಲ್ಲಿ ಬದಲಾವಣೆಗಳು ಪ್ರಾರಂಭವಾಗುತ್ತವೆ. ಏನಾದರೂ ಜಪಿಸುವುದರಲ್ಲಿ ಸಮಯವನ್ನು ವ್ಯಯಿಸುವುದಕ್ಕಿಂತ ಪವಿತ್ರ ಖುರ್‌ಆನಿನ ಆಳವಾದ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವುದು ಉತ್ತಮ. ಜಪಿಸುತ್ತಿರಲು ಏನಾದರೂ ಹೇಳಿಕೊಡಿರಿ ಎಂದು ಜನರು ಕೇಳುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೀವು ಪವಿತ್ರ ಖುರ್‌ಆನನ್ನು ಓದಿ ಮತ್ತು ಅದರ ಬಗ್ಗೆ ಆಳವಾಗಿ ಚಿಂತಿಸಿರಿ. ಜನರು ದುಆ ಮಾಡಲು ಹೇಳುತ್ತಾರೆ ಮತ್ತು ಯಾವುದನ್ನು ಜಪಿಸಬೇಕು ಎಂದು ಕೇಳುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ)ರ ಉಪದೇಶವೇನೆಂದರೆ, ಪವಿತ್ರ ಖುರ್‌ಆನನ್ನು ಓದಿರಿ ಮತ್ತು ಅದರ ಕುರಿತು ಆಳವಾಗಿ ಯೋಚಿಸುವುದು ಉತ್ತಮ. ಹಾಗಾದರೆ ನೀವು ಅನೇಕ ಕೆಡುಕುಗಳು ಮತ್ತು ಸಂಗತಿಗಳು ಮತ್ತು ಕಷ್ಟಗಳಿಂದ ರಕ್ಷಣೆ ಪಡೆಯುವಿರಿ. ನೀವು ಅಲ್ಲಾಹನ ಮಾರ್ಗದರ್ಶನವನ್ನು ಪಡೆಯುವಿರಿ. ಅಲ್ಲಾಹನ ಆಜ್ಞೆಗಳ ಬಗ್ಗೆ ನಿಮಗೆ ಗೊತ್ತಾಗುವುದು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹಝ್ರತ್ ಪೈಗಂಬರ್(ಸ)ರ ಮೇಲೆ ಅವತೀರ್ಣಗೊಳಿಸಿದ್ದು ಅಲ್ಲಾಹನ ವಿಶೇಷವಾದ ವಹಿಯಾಗಿದೆ, ಅದನ್ನು ಹೊರತುಪಡಿಸಿ ಯಾವುದೇ ಅಭಿಪ್ರಾಯವು ತಪ್ಪು ಆಗಿರಬಹುದು, ಸುಳ್ಳು ಆಗಿರಬಹುದು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅದು ಎಷ್ಟು ಬುದ್ಧಿವಂತಿಕೆಯ ಮಾತಾಗಿದ್ದರೂ ಸರಿ. ಕೆಲವು ವಿಷಯಗಳನ್ನು ಮಾನವನು ಬುದ್ಧಿವಂತಿಕೆಯಿಂದಲೂ ಮಾತನಾಡುತ್ತಾನೆ ಮತ್ತು ಅವು ಪವಿತ್ರ ಖುರ್‌ಆನಿನ ಬೋಧನೆಗಳೊಂದಿಗೆ ಹೊಂದಾಣಿಕೆಯಾಗಬಹುದು, ಆದರೆ ಅವು ವಹಿಯಾಗಿ ಅವತೀರ್ಣಗೊಳ್ಳದ ಕಾರಣದಿಂದ, ಪವಿತ್ರ ಖುರ್‌ಆನಿನಲ್ಲಿ ವಿವರಿಸಿದಂತೆ ಅವುಗಳನ್ನು ವಿವರಿಸಲಾಗಿರುವುದಿಲ್ಲ, ಆದ್ದರಿಂದ ಅವು ಸುಳ್ಳು ಎಂದು ಪರಿಗಣಿಸಲಾಗುವುದು ಮತ್ತು ಅವು ತಪ್ಪು ಮಾರ್ಗಗಳಲ್ಲಿ ನಡೆಸುವಂತದ್ದಾಗಿರುವುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹೃದಯವು

*(ಪುಟ ಸಂಖ್ಯೆ–12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರಿಂದ ಜ್ಞಾನಪರ, ಧಾರ್ಮಿಕ ಮತ್ತು ಆಡಳಿತಾತ್ಮಕವಾದ ಎಂತಹ ಕೆಲಸಗಳನ್ನು ಮಾಡಿಸಿದನು ಎಂದರೆ ದೊಡ್ಡ ದೊಡ್ಡ ವಿದ್ಯಾವಂತರು ಕೂಡ ಅವರ ಮುಂದೆ ಶಾಲಾ ವಿದ್ಯಾರ್ಥಿಗಳಂತೆ ಅಥವಾ ಮಕ್ಕಳಂತೆ ಭಾಸವಾಗುತ್ತಿತ್ತು. ಅವರ ಐವತ್ತೆರಡು ವರ್ಷಗಳ ಖಿಲಾಫತ್ ಕಾಲಘಟ್ಟ ಅದರ ಸ್ಪಷ್ಟವಾದ ಪುರಾವೆಯಾಗಿದೆ.**

ಅಹ್ಮದೀಯ ಜಮಾಅತ್‌ನ ಇತಿಹಾಸದಲ್ಲಿ ಮಾರ್ಚ್ ಇಪ್ಪತ್ತಮೂರಿನ ದಿನವು ಬಹಳ ಮಹತ್ವದ್ದಾಗಿದೆ. ಏಕೆಂದರೆ 23 ಮಾರ್ಚ್ 1889ರಂದು, ಬೈಅತ್ ಪಡೆಯುವ ರೀತಿಯನ್ನು ಆರಂಭಿಸುವ ಮೂಲಕ ಹಝ್ರತ್ ಮಸೀಹ್ ಮೌಊದ್(ಅ) ಅಹ್ಮದೀಯ ಜಮಾಅತನ್ನು ಸ್ಥಾಪಿಸಿದರು.

ಅಲ್ಲಾಹನ ಆಜ್ಞೆಯ ಪ್ರಕಾರ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ(ಅ) ಮಾತ್ರ ಇಸ್ಲಾಮಿನ ರಕ್ಷಣೆಗಾಗಿ ಧೀರರಾಗಿ ನಿಂತು ಕಾರ್ಯನಿರ್ವಹಿಸಿದರು.

ಅಲ್ಲಾಹನ ಕೃಪೆಯಿಂದ, ಅಹ್ಮದಿಯ ಜಮಾಅತ್‌ನಲ್ಲಿ ಇದನ್ನು ಪಾಲಿಸುವ ಮತ್ತು ಧರ್ಮದ ಘನತೆಯನ್ನು ಎತ್ತಿಹಿಡಿಯಲು ಮತ್ತು ಜಗತ್ತಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಲು ತಮ್ಮ ಜೀವ, ಸಂಪತ್ತು, ಸಮಯ ಮತ್ತು ಗೌರವವನ್ನು ತ್ಯಾಗ ಮಾಡಲು ಯಾವಾಗಲೂ ಸಿದ್ಧರಿರುವ ಅನೇಕ ನಿಷ್ಠಾವಂತರಿದ್ದಾರೆ.

"ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್(ಸ) (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಕೂಡ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕಾದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ದೇವನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಸಹಾನುಭೂತಿಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ಆದ್ದರಿಂದ ಅವರ ಹೃದಯದ ರಹಸ್ಯ ತಿಳಿದಿದ್ದ ದೇವನು ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ (ಅವರ) ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು. ಅವರು ಎಲ್ಲ ಅನುಗ್ರಹಗಳ ಮೂಲವಾಗಿದ್ದಾರೆ, ಮತ್ತು ಅವರ ಅನುಗ್ರಹವನ್ನು ಒಪ್ಪಿಕೊಳ್ಳದೆ ಯಾವುದೇ ಶ್ರೇಷ್ಠತೆಯನ್ನು ಹೇಳಿಕೊಳ್ಳುವವನು, ಅಂದರೆ ಹಝ್ರತ್ ಪೈಗಂಬರ್(ಸ)ರ ಅನುಗ್ರಹವಿಲ್ಲದೆ ಯಾವುದಾದರೂ ಶ್ರೇಷ್ಠತೆ ಲಭಿಸಿದ್ದಾಗಿ ಹೇಳಿಕೊಳ್ಳುವವನು ಮನುಷ್ಯನಲ್ಲ, ಬದಲಾಗಿ ಶೈತಾನನ ಸಂತತಿ, ಏಕೆಂದರೆ ಪ್ರತಿಯೊಂದು ಶ್ರೇಷ್ಠತೆಯ ಕೀಲಿಗೈ ಅವರಿಗೆ ನೀಡಲ್ಪಟ್ಟಿದೆ." (ಹಝ್ರತ್ ಮಸೀಹ್ ಮೌಊದ್(ಅ))

"ಇಸ್ಲಾಮಿನ ವಿರೋಧದ ಕಾಲದಲ್ಲಿ ಅಲ್ಲಾಹನು ಸ್ಥಾಪಿಸುವ ಜಮಾಅತ್ ಮಸೀಹ್ ಮೌಊದ್‌ರ ಜಮಾಅತ್ ಆಗಿರುತ್ತದೆ. ವಿರೋಧಿಗಳನ್ನು ದಮನಿಸಲು ಮತ್ತು ಇಸ್ಲಾಮಿನ ಪುನರುಜ್ಜೀವನಕ್ಕಾಗಿ ಸ್ಥಾಪಿಸಲಾಗುವ ಜಮಾಅತ್ ಮಸೀಹ್ ಮೌಊದರ ಜಮಾಅತ್ ಆಗಿರುತ್ತದೆ. ಆದ್ದರಿಂದ ಹದೀಸ್‌ಗಳಲ್ಲಿ, ಅಲ್ಲಾಹನು ತನ್ನ ಪ್ರವಾದಿ(ಸ)ರ ಮೂಲಕ ಮಸೀಹ್ ಮೌಊದ್‌ರ ಹೆಸರನ್ನು ಕಾಸರ್-ಎ-ಸಲೀಬ್ ಎಂದು ಇಟ್ಟಿದ್ದಾನೆ, ಎಂದರೆ ಶಿಲುಬೆಯನ್ನು ಮುರಿಯುವವನು." (ಹಝ್ರತ್ ಮಸೀಹ್(ಅ))

ರಸೂಲುಲ್ಲಾಹ್(ಸ) ಪರಿಪೂರ್ಣ ಪ್ರವಾದಿ ಆಗಿದ್ದಾರೆ. ಅಲ್ಲಾಹನು ನಮಗೆ ಖಾತಮುಲ್ ಮುಮಿನೀನ್, ಖಾತಮುಲ್ ಆರಿಫೀನ್ ಮತ್ತು ಖಾತಮುನ್ನಬಿಯೀನ್ ಆಗಿರುವ ಪ್ರವಾದಿಯನ್ನು ನೀಡಿದ್ದಾನೆ ಮತ್ತು ಅದೇ ರೀತಿ ಎಲ್ಲ ಗ್ರಂಥಗಳನ್ನು ಒಳಗೊಂಡಿರುವ ಮತ್ತು ಎಲ್ಲ ಗ್ರಂಥಗಳ ಕೊನೆಯ ಗ್ರಂಥವನ್ನು ಅವರ ಮೇಲೆ ಅವತರಿಸಿದ್ದಾನೆ. ರಸೂಲುಲ್ಲಾಹ್(ಸ) ಖಾತಮುನ್ನಬಿಯೀನ್ ಆಗಿದ್ದಾರೆ ಮತ್ತು ಅವರ ಮೇಲೆ ಪ್ರವಾದಿತ್ವವು ಕೊನೆಗೊಂಡಿದೆ.

**ಮಸೀಹ್ ಮೌಊದ್(ಅ)ಗೆ ಸಂಬಂಧಿತವಾಗಿ ಹಝ್ರತ್ ಮಸೀಹ್ ಮೌಊದ್(ಅ)ರವರ ಜ್ಞಾನಭರಿತ ಅಧ್ಯಾಪನೆಗಳ ಬೆಳಕಿನಲ್ಲಿ ಮಸೀಹ್ ಮೌಊದ್(ಅ) ರ ಆಗಮನದ ಕುರಿತು ವಿಶ್ವಾಸವರ್ಧಕ ಪ್ರಸ್ತಾವನೆ**

ಪಾಕಿಸ್ತಾನದ ಅಹ್ಮದಿಯರಿಗಾಗಿ ಹಾಗೂ ಪ್ರಪಂಚದ ಸ್ಥಿತಿಗಳಿಗಾಗಿ ದುಆ ಮಾಡಬೇಕೆಂದು ಮನವಿ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **21-03-2025** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

إِيَّاكَ نَعْبُدُ وَإِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ನಾಡಿದ್ದು ಮಾರ್ಚ್ 23 ಆಗಿದೆ. ಅಹ್ಮದೀಯ ಜಮಾಅತ್‌ನ ಇತಿಹಾಸದಲ್ಲಿ ಮಾರ್ಚ್ ಇಪ್ಪತ್ತಮೂರಿನ ದಿನವು ಬಹಳ ಮಹತ್ವದ್ದಾಗಿದೆ. ಏಕೆಂದರೆ 23 ಮಾರ್ಚ್ 1889ರಂದು, ಬೈಅತ್ ಪಡೆಯುವ ರೀತಿಯನ್ನು ಆರಂಭಿಸುವ ಮೂಲಕ ಹಝ್ರತ್ ಮಸೀಹ್ ಮೌಊದ್(ಅ) ಅಹ್ಮದೀಯ ಜಮಾಅತನ್ನು ಸ್ಥಾಪಿಸಿದರು. ಅವರ ಆಗಮನವು ಅಲ್ಲಾಹನ ವಾಗ್ದಾನದ ಪ್ರಕಾರ ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಗಳ ಪ್ರಕಾರವಾಗಿತ್ತು. ಆ ಸಮಯದಲ್ಲಿ ಇಸ್ಲಾಮಿನ ಸ್ಥಿತಿ ಬಹಳ ಹೀನಾಯವಾಗಿತ್ತು. ಈಗಲೂ ಧಾರ್ಮಿಕವಾಗಿ ಮುಸ್ಲಿಮರ ಸ್ಥಿತಿ ಶೋಚನೀಯವಾಗಿದೆ, ರಾಜಕೀಯವಾಗಿ ಮತ್ತು ಲೌಕಿಕವಾಗಿಯೂ ಅವರ ಸ್ಥಿತಿ ಕೆಟ್ಟದಾಗಿದೆ, ಅನೇಕ ಮುಸ್ಲಿಂ ದೇಶಗಳು ತೈಲ ಸಂಪತ್ತಿನಿಂದ ಸಮೃದ್ಧವಾಗಿದ್ದರೂ ಅವರ ಪ್ರಾಮುಖ್ಯತೆ

ಮತ್ತು ಘನತೆ ಸಂಪೂರ್ಣವಾಗಿ ಕಳೆದುಹೋಗಿದೆ. ಹೇಗಿದ್ದರೂ, ಹಝ್ರತ್ ಮಸೀಹ್ ಮೌಊದ್(ಅ) ಬೈಅತ್ ಪಡೆದ ಆ ಕಾಲದಲ್ಲಿ ಇಸ್ಲಾಮಿನ ಸ್ಥಿತಿಯನ್ನು ಕಂಡು ಅವರ ಹೃದಯ ರಕ್ತದ ಕಣ್ಣೀರನ್ನು ಸುರಿಸುತ್ತಿತ್ತು. ಅವರ ಹೃದಯದಲ್ಲಿ ತೀವ್ರವಾದ ನೋವಿತ್ತು. ಇಸ್ಲಾಮಿನ ಮೇಲೆ ಇತರ ಧರ್ಮಗಳಿಂದ, ವಿಶೇಷವಾಗಿ ಕ್ರೈಸ್ತ ಧರ್ಮದಿಂದ ನಿರಂತರ ದಾಳಿಗಳು ನಡೆಯುತ್ತಿದ್ದವು, ಆದರೆ ಅವುಗಳಿಗೆ ಉತ್ತರಿಸುವವರು ಯಾರೂ ಇರಲಿಲ್ಲ. ಮುಸ್ಲಿಂ ಉಲೇಮಗಳು ಧರ್ಮಪಂಡಿತರು ಕೂಡ ಭಯಭೀತರಾಗಿದ್ದರು. ಲಕ್ಷಾಂತರ ಮುಸ್ಲಿಮರು ಇಸ್ಲಾಮನ್ನು ತ್ಯಜಿಸಿ ಕ್ರೈಸ್ತ ಧರ್ಮವನ್ನು ಸ್ವೀಕರಿಸುತ್ತಿದ್ದರು. ಆ ಸಮಯದಲ್ಲಿ, ಮುಸ್ಲಿಮರ ಸ್ಥಿತಿ ಹೀಗಿದ್ದಾಗ ಮತ್ತು ಇಸ್ಲಾಮಿನ ಮೇಲೆ ಈ ರೀತಿ ದಾಳಿಗಳು ನಡೆಯುತ್ತಿದ್ದಾಗ, ಅಲ್ಲಾಹನ ಆಜ್ಞೆಯ ಪ್ರಕಾರ ಹಝ್ರತ್ ಮಿರ್ಝಾ? ಗುಲಾಮ್ ಅಹ್ಮದ್ ಖಾದಿಯಾನಿ(ಅ) ಮಾತ್ರ ಇಸ್ಲಾಮಿನ ರಕ್ಷಣೆಗಾಗಿ ಧೀರರಾಗಿ ನಿಂತು ಕಾರ್ಯನಿರ್ವಹಿಸಿದರು. ಆ ಸಮಯದಲ್ಲಿ ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಆರ್ಯ ಸಮಾಜ, ಬ್ರಹ್ಮ ಸಮಾಜ, ಕ್ರೈಸ್ತ ಧರ್ಮ, ನಾಸ್ತಿಕರ ಅಥವಾ ಇತರ ಧರ್ಮಗಳ ಜನರಲ್ಲಿ ಯಾರಾದರೂ ಇಸ್ಲಾಂ ಮತ್ತು ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಮುಹಮ್ಮದ್(ಸ)ರ ಮೇಲೆ ಲೇಖನಗಳ ಮತ್ತು ಭಾಷಣಗಳ ಮೂಲಕ ಭಯಾನಕ ದಾಳಿಗಳನ್ನು ನಡೆಸುತ್ತಿದ್ದಾಗ ಅವುಗಳಿಗೆ ಉತ್ತರವಾಗಿ ಬೈಅತ್ ತೆಗೆದುಕೊಳ್ಳುವುದಕ್ಕೆ ಮೊದಲೇ ಎಂದರೆ ಅಹ್ಮದಿಯಾ ಜಮಾಅತಿನ ಸ್ಥಾಪನೆಗೆ ಮೊದಲೇ ಅದ್ಭುತವಾದ ಗ್ರಂಥಗಳನ್ನು ಬರೆದರು. ಅವು ಬರಾಹೀನೆ ಅಹ್ಮದಿಯಾ ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿವೆ ಮತ್ತು ಬಹಳ ಜನಪ್ರಿಯವಾಗಿವೆ. ಆರಂಭದಲ್ಲಿ ಅವು ನಾಲ್ಕು ಸಂಪುಟಗಳಾಗಿದ್ದವು. ಆ ನಾಲ್ಕು ಸಂಪುಟಗಳಲ್ಲಿ, ಇಸ್ಲಾಮಿನ ವಿರೋಧಿಗಳಾದ ಶತ್ರುಗಳಿಗೆ ಅವರು ತಕ್ಕ ಉತ್ತರಗಳನ್ನು ನೀಡಿದರು. ಅವರು ಬರೆದ ಈ ಗ್ರಂಥಗಳ ಮೊದಲ ಭಾಗವು 1880ರಲ್ಲಿ, ನಂತರ 1882ರಲ್ಲಿ ಮತ್ತು ನಂತರ 1884ರಲ್ಲಿ ಪ್ರಕಟವಾಯಿತು. ಅದರಲ್ಲಿ ಅವರು ಪವಿತ್ರ ಕುರ್‌ಆನ್ ಅಲ್ಲಾಹನ ವಚನವೆಂದೂ, ಅದ್ವಿತೀಯ ಗ್ರಂಥವೆಂದೂ ಮತ್ತು ಹಝ್ರತ್ ಪೈಗಂಬರ್(ಸ) ಸತ್ಯವಂತ, ಪ್ರಾಮಾಣಿಕ ಮತ್ತು ಕೊನೆಯ ಪ್ರವಾದಿ ಎಂಬುದಕ್ಕೆ ಖಂಡಿಸಲಾಗದ ಮತ್ತು ನಿರಾಕರಿಸಲಾಗದ ಪುರಾವೆಗಳನ್ನು ನೀಡಿದರು. ಅವರು ಹೀಗೆಯೂ ಹೇಳಿದರು: ನಾನು ನೀಡುತ್ತಿರುವ ಪುರಾವೆಗಳನ್ನು ಖಂಡಿಸಲು ಪ್ರಯತ್ನಿಸುವವರಿಗೆ ನಾನು ಸವಾಲು ಹಾಕುತ್ತಿದ್ದೇನೆ. ನಾನು ನೀಡುತ್ತಿರುವ ಪುರಾವೆಗಳನ್ನು ಖಂಡಿಸಲು ಅದರ ಮೂರನೇ ಭಾಗ ಅಥವಾ ನಾಲ್ಕನೇ ಭಾಗ ಅಥವಾ ಐದನೇ ಭಾಗದಷ್ಟು ಪುರಾವೆಗಳನ್ನು ಯಾರಾದರೂ ನೀಡಿದರೆ ಹತ್ತು ಸಾವಿರ ರೂಪಾಯಿಗಳನ್ನು ಬಹುಮಾನವಾಗಿ ನೀಡುತ್ತೇನೆ. ಅದು ಆ ಸಮಯದಲ್ಲಿ ಬಹಳ ದೊಡ್ಡ ಮೊತ್ತವಾಗಿತ್ತು. ಹೇಗಿದ್ದರೂ, ಅವರು ಇದನ್ನು ಘೋಷಿಸಿದಾಗ ಮತ್ತು ಗ್ರಂಥಗಳನ್ನು ಪ್ರಕಟಿಸಿದಾಗ, ಇಸ್ಲಾಂ ಬಲವಾದ ಮತ್ತು ಕೊನೆಯ ಧರ್ಮವಾಗಿದೆ ಹಾಗೂ ನಾವು ಜನರ ಬಗ್ಗೆ ಚಿಂತಿಸುವ ಅಥವಾ ಭಯಪಡುವ ಅಗತ್ಯವಿಲ್ಲ ಎಂಬ ಧೈರ್ಯ ಮುಸ್ಲಿಮರಿಗೆ ಬಂತು. ಆ ಸಮಯದ ಜನರು, ಮಾತ್ರವಲ್ಲ ಆ ಕಾಲದ ಉಲೇಮಗಳು ಕೂಡ ಅವರನ್ನು ಬಹಳವಾಗಿ ಹೊಗಳಿದರು.

ಇಸ್ಲಾಮಿನ ಈ ಸೇವೆಯಿಂದಾಗಿ, ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ನಮ್ಮಿಂದ ಬೈಅತ್ ತೆಗೆದುಕೊಳ್ಳಬೇಕೆಂದು ಕೆಲವರು ಹೇಳಿದರು, ಆದರೆ ಅವರಿಗೆ ಅಲ್ಲಾಹನ ಆಜ್ಞೆ ಇಲ್ಲದ ಕಾರಣ, ಅವರು ಆ ಸಮಯದಲ್ಲಿ ಬೈಅತ್ ತೆಗೆದುಕೊಳ್ಳಲಿಲ್ಲ, ಅಲ್ಲಾಹನ ಆಜ್ಞೆ ಬಂದಾಗ, ಅವರು ಬೈಅತ್ ಪಡೆದುಕೊಂಡರು. ಹೀಗೆ ನಿಷ್ಠಾವಂತರ ಜಮಾಅತಿನ ಆರಂಭವಾಯಿತು. ಅನಂತರ ಅಲ್ಲಾಹನು ಅವರೊಡನೆ ಮಸೀಹ್ ಮೌಊದ್ ಮತ್ತು ಮಹ್‌ದಿ ಮೌಊದ್ ಎಂದು ಘೋಷಿಸಬೇಕೆಂದು ಹೇಳಿದನು. ಹೇಗಿದ್ದರೂ, ಬೈಅತ್ ತೆಗೆದುಕೊಳ್ಳುವುದಕ್ಕೆ ಮೊದಲು, ಅವರು 1888ರ ಡಿಸೆಂಬರ್ 1ರಂದು ತಬ್ಲೀಗ್ ಎಂಬ ಹೆಸರಿನಲ್ಲಿ ಒಂದು ಘೋಷಣೆಯನ್ನು ಪ್ರಕಟಿಸಿದರು. ಅದರಲ್ಲಿ ಅವರು ಹೇಳಿದರು:

"ನಾನು ಇಲ್ಲಿ ಎಲ್ಲರೊಡನೆ ಸಾಮಾನ್ಯವಾಗಿ ಮತ್ತು ನನ್ನ ಸಹೋದರ ಮುಸ್ಲಿಮರಿಗೆ ವಿಶೇಷವಾಗಿ ಮತ್ತೊಂದು ಸಂದೇಶವನ್ನು ತಲುಪಿಸುತ್ತಿದ್ದೇನೆ, ಸತ್ಯ, ನಂಬಿಕೆ, ನೈಜ ಸತ್ಯವಿಶ್ವಾಸದ ಪವಿತ್ರತೆ ಮತ್ತು ದೇವನ ಪ್ರೀತಿಯ ರಹಸ್ಯವನ್ನು ಕಲಿಯಲು ಮತ್ತು ಕೊಳಕು ಜೀವನ, ಸೋಮಾರಿತನ ಮತ್ತು ದ್ರೋಹದ ಜೀವನವನ್ನು ತ್ಯಜಿಸಲಿಕ್ಕಾಗಿ ಸತ್ಯವನ್ನು ಹುಡುಕುವವರು ನನ್ನಿಂದ ಬೈಅತ್ ತೆಗೆದುಕೊಳ್ಳಬೇಕೆಂದು ನನ್ನೊಡನೆ ಆಜ್ಞಾಪಿಸಲಾಗಿದೆ. ಆದ್ದರಿಂದ, ತಮ್ಮಲ್ಲಿ ಸ್ವಲ್ಪ ಮಟ್ಟಿಗೆ ಈ ಶಕ್ತಿಯನ್ನು ಹೊಂದಿರುವವರು ನನ್ನ ಬಳಿಗೆ ಬರಬೇಕು, ನಾನು ಅವರ ದುಃಖವನ್ನು ನಿವಾರಿಸಲು ಮತ್ತು ಅವರ ಭಾರವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತೇನೆ, ಮತ್ತು ಅವರು ದೈವಿಕ ಷರತ್ತುಗಳನ್ನು ಪಾಲಿಸಲು ಸಂಪೂರ್ಣವಾಗಿ ಸಿದ್ಧರಾಗಿದ್ದರೆ, ಅವರಿಗಾಗಿ ನಾನು ಮಾಡುವ ಪ್ರಾರ್ಥನೆ ಮತ್ತು ಅವರಿಗಾಗಿ ನಾನು ನೀಡುವ ಗಮನವನ್ನು ಅಲ್ಲಾಹನು ಅನುಗ್ರಹಿಸುವನು. ಈ ದೈವಿಕ ಆಜ್ಞೆಯನ್ನು ಇಂದು ನಾನು ತಲುಪಿಸಿದ್ದೇನೆ, ಈ ಬಗ್ಗೆ ಅರಬಿ ಇಲ್‌ಹಾಮ್ ಅಥವಾ ದಿವ್ಯವಾಣಿ ಹೀಗಿದೆ: "**ಇಝಾ ಅಝಮ್ತ ಫತವಕ್ಕಲ್ ಅಲಲ್ಲಾಹ್ ವಸ್ನಅಲ್ ಫುಲ್ಕ ಬಿಅಯುನಿನಾ ವವಹೀನಾ. ಅಲ್ಲಝೀನ ಯುಬಾಇಯುನೂಕ ಇನ್ನಮಾ ಯುಬಾಇಯೂನಲ್ಲಾಹ್ ಯದುಲ್ಲಾಹ ಫೌಖ ಐದೀಹಿಮ್**." (ಸಬ್ಝ್ ಇಶ್ತಿಹಾರ್, ರೂಹಾನಿ ಖಝಾಇನ್, ಸಂಪುಟ-2, ಪುಟ-470)

ಅಂದರೆ, ನೀನು ಈ ಸೇವೆ ಮಾಡಲು ನಿರ್ಧಾರ ಮಾಡಿರುವಾಗ, ಈಗ ಅಲ್ಲಾಹನ ಮೇಲೆ ಭರವಸೆ ಇಡು ಮತ್ತು ಈ ಹಡಗನ್ನು ನಮ್ಮ ಕಣ್ಣುಗಳ ಮುಂದೆ ಮತ್ತು ನಮ್ಮ ದಿವ್ಯವಾಣಿಯ ಪ್ರಕಾರ ನಿರ್ಮಿಸು. ನಿನ್ನಿಂದ ಬೈಅತ್ ಪಡೆದುಕೊಳ್ಳುವವರು ನಿನ್ನಿಂದಲ್ಲ, ಅಲ್ಲಾಹನಿಂದ ಬೈಅತ್ ಪಡೆದುಕೊಳ್ಳುತ್ತಾರೆ. ಅಲ್ಲಾಹನ ಕೈ ಅವರ ಕೈಗಳ ಮೇಲಿರುವುದು.

ಅನಂತರ ಅಲ್ಲಾಹನು ಭೂಮಿಯ ಮತ್ತು ಆಕಾಶದ ಚಿಹ್ನೆಗಳನ್ನು ತೋರಿಸಿದನು, ಆಕಾಶದ ಚಿಹ್ನೆಗಳಲ್ಲಿ ಒಂದು ಸೂರ್ಯಗ್ರಹಣ ಮತ್ತು ಚಂದ್ರಗಹಣದ ಆಕಾಶೀಯ ಚಿಹ್ನೆಯಾಗಿತ್ತು. ಇದರ ಬಗ್ಗೆ "ಇದು ನನ್ನ ಮಹ್ದಿಯ ಆಗಮನದ ವಿಶೇಷ ದೃಷ್ಟಾಂತವಾಗಿದೆ ಎಂದೂ ಇದು ರಮಝಾನ್ ತಿಂಗಳಲ್ಲಿ ನಿರ್ದಿಷ್ಟ ದಿನಾಂಕಗಳಲ್ಲಿ ಸಂಭವಿಸುವುದು" ಎಂದು ಹಝ್‌ರತ್ ಪೈಗಂಬರ್(ಸ) ಹೇಳಿದ್ದರು. (ಸ್ ುನ್ ನ್ ದಾರುಲ್ ಕುತ್ನಿ, ಕಿತಾಬುಲ್ ಈದೈನ್, ಬಾಬ್ ಸಫತುಸ್ಸಲಾತ್ ವಲ್ ಖುಸೂಫ್ ವಲ್ ಕುಸೂಫ್ ಹದೀಸ್-1795, ಮುಅಸ್ಸಸುರ್ರಿಸಾಲ ಬೈರುತ್)

ಅದು 1894ರಲ್ಲಿ ಪೂರ್ವದಲ್ಲಿ ಮತ್ತು 1895ರಲ್ಲಿ ಪಶ್ಚಿಮದಲ್ಲಿ ಸಂಭವಿಸಿತು, ಅನೇಕ ಸಾತ್ವಿಕ ಜನರು ಈ ದೃಷ್ಟಾಂತವನ್ನು ನೋಡಿ ಹಝ್‌ರತ್ ಮಸೀಹ್ ಮೌಊದ್(ಅ)ರನ್ನು ಸ್ವೀಕರಿಸಿದರು.

"ಇಲ್ಲಿ ಒಂದು ವಿಷಯವನ್ನು ಹೇಳಲು ಬಯಸುತ್ತೇನೆ, ಈ ರಮಝಾನ್‌ನಲ್ಲಿಯೂ ಚಂದ್ರಗ್ರಹಣ ಸಂಭವಿಸಿದೆ ಮತ್ತು ಸೂರ್ಯಗ್ರಹಣ ನಡೆಯಲಿಕ್ಕಿದೆ, ಮತ್ತು ಅದೇ ದಿನಾಂಕಗಳಲ್ಲಿ ಸಂಭವಿಸಲಿದೆ. ಹೀಗೆ ಭವಿಷ್ಯದಲ್ಲಿಯೂ ಸಂಭವಿಸಬಹುದು, ಆದರೆ ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ ಮತ್ತು ಅವರ ವಾದದ ನಂತರ ಉಂಟಾದ ಚಂದ್ರ ಮತ್ತು ಸೂರ್ಯಗ್ರಹಣಗಳಿಗೆ ಅವುಗಳದೇ ಆದ ಮಹತ್ವವಿದೆ. ಅವರು ಅಲ್ಲಾಹನಿಂದ ಒಂದು ಚಿಹ್ನೆಯನ್ನು ಕೇಳಿದರು ಮತ್ತು ಅಲ್ಲಾಹನು ಚಿಹ್ನೆಯನ್ನು ತೋರಿಸಿದನು. ಕೆಲವು ಅಹ್ಮದಿಯರು ಈ ದಿನಗಳಲ್ಲಿ ಸಂಭವಿಸುತ್ತಿರುವ ಚಂದ್ರ ಮತ್ತು ಸೂರ್ಯಗ್ರಹಣಗಳನ್ನು ದೃಷ್ಟಾಂತಗಳೆಂದು ಹೇಳುತ್ತಿದ್ದಾರೆ, ಇದರ ಬಗ್ಗೆ ಅಲ್ಲಾಹನೇ ಬಲ್ಲನು, ಹೇಗಿದ್ದರೂ, ಚಿಹ್ನೆಯೆಂದು ಭಾವಿಸುವುದಾದರೆ, ಇದು ನೂರ ಮೂವತ್ತೈದು ಮೂವತ್ತಾರು ವರ್ಷಗಳ ಹಿಂದಿನ ವಾದದ ಒಂದು ಸರಪಳಿಯಾಗಿದೆ, ಆದರೆ ಅವರ ಕಾಲದಲ್ಲಿ ಸಂಭವಿಸಿದ ಗ್ರಹಣವು ಪೂರ್ವ ಮತ್ತು ಪಶ್ಚಿಮದಲ್ಲಿ ಉಂಟಾಗಿತ್ತು. ಈ ವರ್ಷ ಉಂಟಾಗುತ್ತಿರುವ ಗ್ರಹಣವು ಹೆಚ್ಚಾಗಿ ಪಶ್ಚಿಮದಲ್ಲಿ ಸಂಭವಿಸುತ್ತಿದೆ, ಆದ್ದರಿಂದ ಆ ಕಾಲದ ಗ್ರಹಣಕ್ಕೆ ಈ ಕಾಲದ ಗ್ರಹಣದಷ್ಟೇ ಮಹತ್ವವನ್ನು ನಾವು ನೀಡಲು ಸಾಧ್ಯವಿಲ್ಲ, ಮತ್ತು ಇದು ಸಣ್ಣ ಭಾಗದಲ್ಲಿ ಉಂಟಾಗುತ್ತಿದೆ, ಅಂದರೆ ಸೂರ್ಯನ ಇಪ್ಪತ್ತೈದು ಮೂವತ್ತು ಪ್ರತಿಶತ ಭಾಗವು ಆವರಿಸಲ್ಪಡುತ್ತದೆ. ಹಝ್ರತ್ ಮಸೀಹ್ ಮೌಊದ್(ಅ)ರ ಕಾಲದಲ್ಲಿ, ಗ್ರಹಣವು ಎಪ್ಪತ್ತೈದರಿಂದ ನೂರು ಪ್ರತಿಶತದ ವರೆಗೆ ಆವರಿಸಿತ್ತು ಮತ್ತು ಅದು ಪ್ರಾರಂಭವಾದಾಗ, ಹಝ್‌ರತ್ ಮಸೀಹ್ ಮೌಊದ್(ಅ)ರಿಗೆ ತೋರಿಸಲಾದಾಗ, ಅವರು ಹೀಗೆ ಹೇಳಿದರು: "ನಾವು ನೋಡಿದ್ದೇವೆ, ಆದರೆ ವಿರೋಧಿಗಳು ಇದರಿಂದ ಯಾವುದೇ ಪ್ರಯೋಜನವನ್ನು ಪಡೆಯಲಾರರು". ಅನಂತರ ಆ ಗ್ರಹಣ ನಿಧಾನವಾಗಿ ಹೆಚ್ಚುತ್ತಾ ಪೂರ್ಣವಾದ ಸೂರ್ಯಗ್ರಹಣ ಸಂಭವಿಸಿತು. ಹೇಗಿದ್ದರೂ, ನಾನು ಇದನ್ನು ಸಾಂದರ್ಭಿಕವಾಗಿ ಹೇಳುತ್ತಿದ್ದೇನೆ ಅಷ್ಟೆ.

ಅವರು 1889ರ ಜನವರಿ 12ರಂದು ತಕ್ಮೀಲ್ ತಬ್ಲೀಗ್ ಎಂಬ ಹೆಸರಿನಲ್ಲಿ ಒಂದು ಘೋಷಣೆಯನ್ನು ಪ್ರಕಟಿಸಿದರು, ಅದರಲ್ಲಿ ಹತ್ತು ಬೈಅತ್ ಷರತ್ತುಗಳನ್ನು ಇರಿಸಿದರು, ನಮಗೆ ತಿಳಿದಿರುವಂತೆ, ಅಹ್ಮದಿಯ ಜಮಾಅತ್‌ನಲ್ಲಿ ಹತ್ತು ಬೈಅತ್ ಶರತ್ತುಗಳಿವೆ, ಅವುಗಳನ್ನು ಪಾಲಿಸುವುದು ಮತ್ತು ಅವುಗಳನ್ನು ಸಂಪೂರ್ಣವಾಗಿ ಸ್ವೀಕರಿಸುವುದು ಅಹ್ಮದಿಯಾಗಲು ಅವಶ್ಯಕವಾಗಿದೆ. ಬೈಅತ್ ಮಾಡುವವರೊಡನೆ ಹೀಗೆ ಪ್ರತಿಜ್ಞೆಯನ್ನು ಮಾಡಬೇಕೆಂದು ಅದರಲ್ಲಿ ನಿರ್ದೇಶಿಸಿದರು: "ನಾನು ಜೀವನದುದ್ದಕ್ಕೂ ಶಿರ್ಕ್‌ನಿಂದ ದೂರವಿರುತ್ತೇನೆ." ಸುಳ್ಳು, ವ್ಯಭಿಚಾರ, ದುರ್ನೋಟ, ಮೋಸಗಾರಿಕೆ, ಅಕ್ರಮ, ದಬ್ಬಾಳಿಕೆ, ದ್ರೋಹ, ಗಲಭೆ ಮತ್ತು ದಂಗೆಯ ಮಾರ್ಗಗಳಿಂದ ನಾನು ದೂರವಿರುತ್ತೇನೆ. ಎಂತಹ ಸನ್ನಿವೇಶಗಳು ಬಂದರೂ ಮಾನುಷಿಕ ಭಾವನೆಗಳನ್ನು ನಿಯಂತ್ರಿಸುವೆನು. ನಾನು ನಮಾಝ್‌ಗಳ ಕಡೆಗೆ ಸಂಪೂರ್ಣ ಗಮನವನ್ನು ನೀಡುತ್ತೇನೆ ಮತ್ತು ಅಲ್ಲಾಹನು ಮತ್ತು ಅವನ ಸಂದೇಶವಾಹಕರ ಆಜ್ಞೆಗಳ ಪ್ರಕಾರ ಅವುಗಳನ್ನು

ಸರಿಯಾಗಿ ನಿರ್ವಹಿಸಲು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ. ತಹಜ್ಜುದ್ ನಮಾಝ್‌ಗಳನ್ನು ಅನುಷ್ಠಿಸಲು ನಾನು ಪ್ರಯತ್ನಿಸುತ್ತೇನೆ. ನನ್ನ ಪಾಪಗಳಿಗಾಗಿ ಕ್ಷಮೆಯನ್ನು ಯಾಚಿಸುತ್ತೇನೆ. ಇಸ್ತಿಗ್‌ಫಾರ್ ಮಾಡುತ್ತೇನೆ. ಜನರಿಗೆ ಅನಗತ್ಯವಾಗಿ ನೋವನ್ನುಂಟುಮಾಡುವಂತಹ ಯಾವುದೇ ಆವೇಶಗಳನ್ನು ಮಾತಿನಿಂದಲೋ ಅಥವಾ ಕೈಯಿಂದಲೋ ಪ್ರಕಟಿಸುವುದಿಲ್ಲ. ಪ್ರತಿಯೊಂದು ಸ್ಥಿತಿಯಲ್ಲಿಯೂ ನಾನು ಅಲ್ಲಾಹನಿಗೆ ನಿಷ್ಠನಾಗಿರುತ್ತೇನೆ ಮತ್ತು ಅಲ್ಲಾಹನ ಇಚ್ಛೆಗೆ ನಾನು ತೃಪ್ತನಾಗಿರುತ್ತೇನೆ. ಮತ್ತು ಪವಿತ್ರ ಕುರ್‌ಆನ್‌ನ ಪ್ರತಿಯೊಂದು ಆಜ್ಞೆಯನ್ನು ಪಾಲಿಸಲು ನಾನು ಪ್ರಯತ್ನಿಸುತ್ತೇನೆ ಮತ್ತು ಅವುಗಳನ್ನು ಹುಡುಕಿ ಪಾಲಿಸುತ್ತೇನೆ. ಅಲ್ಲಾಹನು ಯಾವುದರಿಂದ ದೂರವಿರಲು ಹೇಳಿರುವನೋ ಅದರಿಂದ ನಾನು ದೂರವಿರುತ್ತೇನೆ, ಅಲ್ಲಾಹನು ಮತ್ತು ಅವನ ಸಂದೇಶವಾಹಕರ ಮಾತುಗಳನ್ನು ಪಾಲಿಸುವುದು ನನ್ನ ರೀತಿಯಾಗಿರುವುದು. ನಾನು ವಿನಯ, ನಮ್ರತೆ ಮತ್ತು ತಾಳ್ಮೆಯನ್ನು ಕೈಗೊಳ್ಳುವನು. ಅಹಂಕಾರ ಮತ್ತು ಗರ್ವದಿಂದ ದೂರವಿರುತ್ತೇನೆ. ಧರ್ಮದ ಗೌರವ ಮತ್ತು ಸಹಾನುಭೂತಿಯನ್ನು ನನ್ನ ಸಂಪತ್ತು ಮತ್ತು ಜೀವಕ್ಕಿಂತ ಹೆಚ್ಚು ಪ್ರಿಯವಾಗಿ ಪರಿಗಣಿಸುತ್ತೇನೆ. ನನ್ನ ಸಾಮರ್ಥ್ಯ ಮತ್ತು ಶಕ್ತಿಗಳಿಗೆ ಅನುಗುಣವಾಗಿ ನಾನು ಯಾವಾಗಲೂ ಮಾನವಕುಲಕ್ಕೆ ಪ್ರಯೋಜನವನ್ನು ನೀಡಲು ಪ್ರಯತ್ನಿಸುತ್ತೇನೆ. ನಾನು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಮಾಡಿದ ಬೈಅತ್ ಪ್ರತಿಜ್ಞೆಯನ್ನು ನನ್ನ ಮರಣದ ವರೆಗೂ ಪಾಲಿಸುತ್ತೇನೆ. ಅವರು ಶರಿಯತಿಗೆ ಅನುಗುಣವಾಗಿ ನೀಡುತ್ತಿರುವ ಪ್ರತಿಯೊಂದು ಆಜ್ಞೆಯನ್ನು ನಾನು ಯಾವಾಗಲೂ ಪಾಲಿಸುತ್ತೇನೆ, ಶರಿಯತಿಗೆ ವಿರುದ್ಧವಾಗಿ ಅವರು ಆಜ್ಞೆ ನೀಡಲು ಸಾಧ್ಯವಿಲ್ಲ, ಏಕೆಂದರೆ ಅವರು ಹಝ್ರತ್ ಪೈಗಂಬರ್(ಸ)ರ ಧರ್ಮವನ್ನು ಹರಡಲು ಬಂದಿದ್ದರು. ಅದೇ ರೀತಿಯಲ್ಲಿ ನಾನು ಹಝ್ರತ್ ಮಸೀಹ್ ಮೌಊದ್(ಅ)ರೊಂದಿಗೆ ಯಾವುದೇ ಲೌಕಿಕ ಸಂಬಂಧದಲ್ಲಿ ಕಂಡುಬರದಂತಹ ಸಂಬಂಧವನ್ನು ಇರಿಸುತ್ತೇನೆ. (ಇಝಾಲ ಔಹಾಮ್, ರೂಹಾನಿ ಖಝಾಇನ್, ಸಂಪುಟ–3, ಪುಟ–563–564)

ನಾನು ಹೇಳಿದ್ದು ಆ ಬೈಅತ್ ಷರತ್ತುಗಳ ಸಾರಾಂಶವಾಗಿದೆ. ಹೀಗೆ ಅನೇಕ ನಿಷ್ಠಾವಂತರು ಈ ನಿಬಂಧನೆಯ ಪ್ರಕಾರ ಬೈಅತ್ ಮಾಡಿದರು ಮತ್ತು ಇಂದಿನವರೆಗೂ ನಾವು ಇದೇ ಷರತ್ತುಗಳ ಪ್ರಕಾರ ಬೈಅತ್ ಪಡೆದುಕೊಳ್ಳುತ್ತಿದ್ದೇವೆ. ನಾನು ವಿವರಿಸಿದ ವಿಷಯಗಳ ಬಗ್ಗೆ ನಾವು ಆಲೋಚಿಸಬೇಕು, ನಾವು ಈ ಎಲ್ಲ ವಿಷಯಗಳನ್ನು ಪಾಲಿಸುತ್ತಿದ್ದೇವೆಯೇ?

ಇದೊಂದು ರಿಮೈಂಡರ್ ಆಗಿದೆ. ಒಂದು ಜ್ಞಾಪನೆಯಾಗಿದೆ. ಇದೇ ಕಾರಣದಿಂದ ಅಲ್ಲಾಹನ ಕೃಪೆಯಿಂದ, ಅಹ್ಮದಿಯ ಜಮಾಅತ್‌ನಲ್ಲಿ ಇದನ್ನು ಪಾಲಿಸುವ ಮತ್ತು ಧರ್ಮದ ಘನತೆಯನ್ನು ಎತ್ತಿಹಿಡಿಯಲು ಮತ್ತು ಜಗತ್ತಿಗೆ ಇಸ್ಲಾಮಿನ ಸಂದೇಶವನ್ನು ತಲುಪಿಸಲು ತಮ್ಮ ಜೀವ, ಸಂಪತ್ತು, ಸಮಯ ಮತ್ತು ಗೌರವವನ್ನು ತ್ಯಾಗ ಮಾಡಲು ಯಾವಾಗಲೂ ಸಿದ್ಧರಿರುವ ಅನೇಕ ನಿಷ್ಠಾವಂತರಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಹೇಳಿದಂತೆ ಇಸ್ಲಾಮಿನ ತಬ್ಲೀಗನ್ನು ಮಾಡಲು ನಾವು ಪ್ರಯತ್ನಿಸುತ್ತೇವೆ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರೀತಿಯನ್ನು ನಮ್ಮ ಉತ್ತುಂಗಕ್ಕೆ ಕೊಂಡೊಯ್ಯುತ್ತೇವೆ ಎಂದು ಹೇಳುವ ನಿಷ್ಠಾವಂತರು ಇದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ)ರ ಹೃದಯದಲ್ಲಿ ಹಝ್ರತ್ ಪೈಗಂಬರ್(ಸ)ರೊಡನೆ ಇದ್ದ ಪ್ರೀತಿಯ ಸ್ಥಿತಿಯನ್ನು ಅವರ ಒಂದು ಉಲ್ಲೇಖದಿಂದ ಗೊತ್ತುಮಾಡಬಹುದಾಗಿದೆ. ಅವರು ಹೇಳುತ್ತಾರೆ: ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ. ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್(ಸ) (ಸಾವಿರ ಸಾವಿರ ಇಷ್ಟಾಶೀರ್ವಾದಗಳೂ ಶಾಂತಿಯೂ ಅವರ ಮೇಲೆ ಸುರಿಯಲ್ಪಡಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತಸ್ಥಾನದ ಕೊನೆ ಎಲ್ಲಿದೆಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಕೂಡ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಅವರ ಸ್ಥಾನಮಾನಗಳನ್ನು ಗುರುತಿಸಬೇಕಾದ ರೀತಿಯಲ್ಲಿ ಗುರುತಿಸಲಾಗಿಲ್ಲ ಎಂಬುದು ದುಃಖಕರವಾದ ಸಂಗತಿಯಾಗಿದೆ. ಏಕಾದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ತಂದ ಒಬ್ಬನೇ ಒಬ್ಬ ಪಹಿಲ್ವಾನ್ ಅವರೇ ಆಗಿದ್ದಾರೆ. ಅವರು ದೇವನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಸಹಾನುಭೂತಿಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ಆದ್ದರಿಂದ ಅವರ ಹೃದಯದ ರಹಸ್ಯ ತಿಳಿದಿದ್ದ ದೇವನು ಅವರಿಗೆ ಎಲ್ಲ ಪ್ರವಾದಿಗಳ ಮೇಲೆಯೂ (ಅವರ) ಹಿಂದಿನ ಮತ್ತು ಅನಂತರದ ಎಲ್ಲರ ಮೇಲೆಯೂ ಅವನು ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಅವನು ಈಡೇರಿಸಿಕೊಟ್ಟನು. ಅವರು ಎಲ್ಲ ಅನುಗ್ರಹಗಳ ಮೂಲವಾಗಿದ್ದಾರೆ, ಮತ್ತು ಅವರ ಅನುಗ್ರಹವನ್ನು ಒಪ್ಪಿಕೊಳ್ಳದೆ ಯಾವುದೇ ಶ್ರೇಷ್ಠತೆಯನ್ನು ಹೇಳಿಕೊಳ್ಳುವವನು, ಅಂದರೆ ಹಝ್ರತ್ ಪೈಗಂಬರ್(ಸ)ರ ಅನುಗ್ರಹವಿಲ್ಲದೆ ಯಾವುದಾದರೂ ಶ್ರೇಷ್ಠತೆ ಲಭಿಸಿದ್ದಾಗಿ ಹೇಳಿಕೊಳ್ಳುವವನು ಮನುಷ್ಯನಲ್ಲ, ಬದಲಾಗಿ ಶೈತಾನನ ಸಂತತಿ, ಏಕೆಂದರೆ ಪ್ರತಿಯೊಂದು ಶ್ರೇಷ್ಠತೆಯ ಕೀಲಿಗೈ ಅವರಿಗೆ ನೀಡಲ್ಪಟ್ಟಿದೆ." (ಹಖೀಖತುಲ್ ವಹೀ, ರೂಹಾನಿ ಖಝಾಇನ್, ಸಂಪುಟ–22, ಪುಟ–118–119)

ಹಝ್ರತ್ ಮಸೀಹ್ ಮೌಊದ್(ಅ) ಈ ರೀತಿಯಾಗಿ ಹಝ್ರತ್ ಪೈಗಂಬರ್(ಸ)ರ ಸ್ಥಾನದ ಬಗ್ಗೆ ಅನೇಕ ಸ್ಥಳಗಳಲ್ಲಿ ಹೇಳಿದ್ದಾರೆ."

"ಮತ್ತೊಂದೆಡೆ ಅವರು ಹೇಳುತ್ತಾರೆ: 'ಯಾವ ಮನುಷ್ಯನು ತನ್ನ ವ್ಯಕ್ತಿತ್ವದಿಂದ, ತನ್ನ ಗುಣಗಳಿಂದ, ತನ್ನ ಕ್ರಿಯೆಗಳಿಂದ, ತನ್ನ ಆಧ್ಯಾತ್ಮಿಕ ಮತ್ತು ಪವಿತ್ರ ಶಕ್ತಿಗಳ ಪ್ರಬಲ ನದಿಯಿಂದ, ಜ್ಞಾನ, ಕಾರ್ಯ, ಸತ್ಯ ಮತ್ತು ಸ್ಥಿರತೆಯ ಪರಿಪೂರ್ಣ ಮಾದರಿಯನ್ನು ತೋರಿಸಿದರೋ ಮತ್ತು ಪರಿಪೂರ್ಣ ಮನುಷ್ಯನೆಂದು ಕರೆಯಲ್ಪಟ್ಟರೋ, ಯಾವ ಮನುಷ್ಯನು ಅತ್ಯಂತ ಪರಿಪೂರ್ಣ ಮತ್ತು ಪರಿಪೂರ್ಣ ಮನುಷ್ಯನಾಗಿದ್ದನೋ ಮತ್ತು ಪರಿಪೂರ್ಣ ಪ್ರವಾದಿಯಾಗಿದ್ದರೋ ಮತ್ತು ಪರಿಪೂರ್ಣ ಅನುಗ್ರಹಗಳೊಂದಿಗೆ ಬಂದರೋ, ಅವರ ಮೂಲಕ ಉಂಟಾದ ಆಧ್ಯಾತ್ಮಿಕ ಪುನರುತ್ಥಾನದ ಕಾರಣದಿಂದ ಮೊದಲ ಕಯಾಮತ್ ಸಂಭವಿಸಿತು ಮತ್ತು ಸತ್ತುಹೋಗಿದ್ದ ಒಂದು ಜಗತ್ತು ಅವರ ಆಗಮನದಿಂದ ಜೀವಂತವಾಯಿತು, ಆ ಅನುಗ್ರಹೀತ ಪ್ರವಾದಿ ಹಝ್ರತ್ ಖಾತಮುಲ್ ಅಂಬಿಯಾ, ಇಮಾಮುಲ್ ಅಸ್ಫಿಯಾ, ಖತಮುಲ್ ಮುರ್ಸಲೀನ್, ಫಖ್ರುನ್ ನಬಿಯೀನ್ ಜನಾಬ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರು ಆಗಿದ್ದಾರೆ. ಹೇ ಪ್ರಿಯ ದೇವಾ, ಈ ಪ್ರಿಯ ಪ್ರವಾದಿಯ ಮೇಲೆ ಲೋಕದ ಆರಂಭದಿಂದ ಯಾರ ಮೇಲೂ ಕಳುಹಿಸದಂತಹ ಕರುಣೆ ಮತ್ತು ಅನುಗ್ರಹ ಆಶೀರ್ವಾದಗಳನ್ನು ವರ್ಷಿಸು.' (ಇತಮಾಮೆ ಹುಜ್ಜತ್, ರೂಹಾನಿ ಖಝಾಇನ್, ಸಂಪುಟ–8, ಪುಟ–308)

ಆದ್ದರಿಂದ, ಇವುಗಳಾಗಿದ್ದುವು ಆ ಮಾತುಗಳು, ಇದು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ರೊಂದಿಗೆ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಇದ್ದ ಪ್ರೀತಿಯಾಗಿತ್ತು. ಇದೇ ಕಾರಣದಿಂದಾಗಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರನ್ನು ಈ ಕಾರ್ಯಕ್ಕಾಗಿ ಕಳುಹಿಸಿದನು, ಇಸ್ಲಾಮಿನ ಪುನರುತ್ಥಾನದ ಕೆಲಸವನ್ನು ಈಗ ಹಝ್ರತ್ ಮಸೀಹ್ ಮೌಊದ್(ಅ) ನಿರ್ವಹಿಸಬೇಕಾಗಿತ್ತು. ಅಲ್ಲಾಹನು ಅವರೊಡನೆ ಹೇಳಿದನು: ಈಗ ಈ ಪ್ರೀತಿಯ ಕಾರಣದಿಂದ ನಾನು ನಿಮಗೆ ಮಸೀಹ್ ಮೌಊದ್ ಮತ್ತು ಮಹ್ದಿ ಮೌಊದ್ ಎಂಬ ಸ್ಥಾನವನ್ನು ನೀಡುತ್ತಿದ್ದೇನೆ. ಅದನ್ನು ಘೋಷಿಸು. ಈ ಕೊನೆಯ ಕಾಲದಲ್ಲಿ ಇಸ್ಲಾಮಿನ ಪುನರುತ್ಥಾನದ ವಾಗ್ದಾನವನ್ನು ನಾನು ಪೂರೈಸುತ್ತೇನೆ ಮತ್ತು ಈ ಕಾರ್ಯವನ್ನು ನಿನಗೆ ಒಪ್ಪಿಸುತ್ತೇನೆ ಎಂದು ಅಲ್ಲಾಹನು ಹೇಳಿದನು. ಒಟ್ಟಿನಲ್ಲಿ ಈ ಕಾರ್ಯಗಳಿಗಾಗಿ ಹಝ್ರತ್ ಮಸೀಹ್ ಮೌಊದ್(ಅ) ಆಗಮಿಸಿದರು. ಅವರು ಆ ಕಾರ್ಯಗಳನ್ನು ಚೆನ್ನಾಗಿ ನಿರ್ವಹಿಸಿದರು. ಅವರು ಜಮಾಅತಿನವರೊಡನೆ ಉಪದೇಶಿಸಿದರು ಮತ್ತು ಹೀಗೆ ಹೇಳಿದರು: ನನ್ನ ಕೈಯಲ್ಲಿ ಬೈಅತ್ ಮಾಡಿದ ನಂತರ ನೆನಪಿಡಬೇಕಾದ ಸಂಗತಿಯೇನೆಂದರೆ, ಮಸೀಹ್ ಮೌಊದ್‌ರೊಂದಿಗೆ ಸಹಾಬಿಯರಂತಹ ಜನರು ಇರುತ್ತಾರೆ ಎಂದು ಅಲ್ಲಾಹನು ಹೇಳಿದ್ದಾನೆ. ಆದ್ದರಿಂದ, ಇದು ಅಲ್ಲಾಹನ ಮಾತಾಗಿರುವಾಗ, ನಾವು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್‌ರ ಹೆಸರನ್ನು ಪ್ರಕಾಶಮಾನಗೊಳಿಸುತ್ತೇವೆ ಮತ್ತು ಇಸ್ಲಾಮಿನ ಹೆಸರನ್ನು ಪ್ರಕಾಶಮಾನಗೊಳಿಸುತ್ತೇವೆ ಮತ್ತು ಇಸ್ಲಾಮಿನ ತಬ್ಲೀಗನ್ನು ಪ್ರಪಂಚದ ಮೂಲೆ ಮೂಲೆಗೆ ತಲುಪಿಸುತ್ತೇವೆ ಎಂದು ಪ್ರತಿಜ್ಞೆ ಮಾಡಿರುವ ನಾವು ಸಹಾಬಿಯರ ಗುಣವನ್ನು ನಮ್ಮೊಳಗೆ ಉಂಟುಮಾಡಬೇಕಾಗುವುದು.

ಇದರ ವಿವರಣೆಯಲ್ಲಿ ಒಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

"ನಮ್ಮ ಪರಿಪೂರ್ಣ ಮಾರ್ಗದರ್ಶಕರಾದ ಪೈಗಂಬರ್(ಸ)ರ ಸಹಾಬಿಯರು ತಮ್ಮ ದೇವನಿಗಾಗಿ ಮತ್ತು ರಸೂಲ್‌ಗಾಗಿ ಎಂತೆಂತಹ ತ್ಯಾಗಗಳನ್ನು ಮಾಡಿದ್ದಾರೆ. ಅವರಿಗೆ ಸ್ವದೇಶವನ್ನು ತ್ಯಜಿಸಬೇಕಾಗಿ ಬಂತು, ದೌರ್ಜನ್ಯವನ್ನು ಅನುಭವಿಸಿದರು, ವಿವಿಧ ರೀತಿಯ ಕಷ್ಟಗಳನ್ನು ಸಹಿಸಿಕೊಂಡರು, ಜೀವವನ್ನು ತ್ಯಾಗ ಮಾಡಿದರು, ಆದರೆ ಅವರು ಸತ್ಯ ಮತ್ತು ನಿಷ್ಠೆಯಿಂದ ಹೆಜ್ಜೆ ಹಾಕಿದರು. ಅವರನ್ನು ಅಂತಹ ತ್ಯಾಗಿಗಳನ್ನಾಗಿ ಮಾಡಿದ ಸಂಗತಿ ಏನಾಗಿತ್ತು? ಅದು ಅವರ ಹೃದಯದಲ್ಲಿ ಪ್ರಭಾವ ಬೀರಿದ್ದ ಸತ್ಯವಾದ ದೈವಿಕ ಪ್ರೀತಿಯ ಉತ್ಸಾಹದ ಕಿರಣವಾಗಿತ್ತು. ಆದ್ದರಿಂದ, ಯಾವುದೇ ಪ್ರವಾದಿಯೊಂದಿಗೆ ಹೋಲಿಕೆ ಮಾಡಿದರೂ, ರಸೂಲುಲ್ಲಾಹ್(ಸ)ರ ಬೋಧನೆ, ಆತ್ಮಶುದ್ಧೀಕರಣ, ತಮ್ಮ ಅನುಯಾಯಿಗಳನ್ನು ಲೌಕಿಕತೆಯಿಂದ ದೂರವಿರಿಸುವುದು, ಶೌರ್ಯದೊಂದಿಗೆ ಸತ್ಯಕ್ಕಾಗಿ ರಕ್ತವನ್ನು ಹರಿಸುವುದು, ಇವುಗಳ ಉದಾಹರಣೆ

ಎಲ್ಲಿಯೂ ಸಿಗಲಾರದು.

ಈ ಸ್ಥಾನವು ಹಝ್ರತ್ ಪೈಗಂಬರ್(ಸ)ರ ಸಹಾಬಿಯರದ್ದಾಗಿತ್ತು. ಅವರ ನಡುವೆ ಇದ್ದ ಪ್ರೀತಿ ಮತ್ತು ಅನುರಾಗವನ್ನು ಪವಿತ್ರ ಖುರ್‌ಆನಿನಲ್ಲಿ ಎರಡು ವಾಕ್ಯಗಳಲ್ಲಿ ವಿವರಿಸಲಾಗಿದೆ. **'ವ ಅಲ್ಲಫ ಬೈನ ಕುಲೂಬಿಹಿಮ್ ಲವ್ ಅನ್ಫಕ್ತ ಮಾ ಫಿಲ್ ಅರ್‌ಝಿ? ಜಮೀಅನ್ ಮಾ ಅಲ್ಲಫ್‌ತ ಬೈನ ಕುಲೂಬಿಹಿಮ್ ವಲಾಕಿನ್ನಲ್ಲಾಹ ಅಲ್ಲಫ ಬೈನಹುಮ್'**. (ಅಲ್‌ಅನ್‌ಫಾಲ್: 64) ಅಂದರೆ, ಅವರಲ್ಲಿರುವ ಒಗ್ಗಟ್ಟು ಮತ್ತು ಪ್ರೀತಿ ಚಿನ್ನದ ಪರ್ವತವನ್ನು ನೀಡಿದರೂ ಖಂಡಿತವಾಗಿಯೂ ಉಂಟಾಗುತ್ತಿರಲಿಲ್ಲ. ಅಂದರೆ ಅಲ್ಲಾಹನು ಅವರಲ್ಲಿ ಉಂಟುಮಾಡಿದ ಈ ಪ್ರೀತಿ ಮತ್ತು ಅನುರಾಗವನ್ನು ನೀವು ಅಪಾರ ಸಂಪತ್ತನ್ನು ಖರ್ಚು ಮಾಡಿದರೂ ಉಂಟುಮಾಡಲು ಸಾಧ್ಯವಿಲ್ಲ. ಆದ್ದರಿಂದ, ಇದು ಅಲ್ಲಾಹನು ಉಂಟುವಾಡಿದ ಪ್ರೀತಿ ಮತ್ತು ಅನುರಾಗವಾಗಿದೆ, ಏಕೆಂದರೆ ಅವರಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆ ಇತ್ತು. ಅವರು ರಸೂಲುಲ್ಲಾಹ್(ಸ) ಮತ್ತು ಇಸ್ಲಾಂಗಾಗಿ ತಮ್ಮ ಜೀವವನ್ನು ತ್ಯಾಗ ಮಾಡಲು ಸಿದ್ಧರಾಗಿದ್ದರು.

ಈಗ ಇನ್ನೊಂದು ಜಮಾಅತ್ ಮಸೀಹ್ ಮೌಊದ್‌ರದ್ದು ಇದೆ. ಅವರು ತಮ್ಮೊಳಗೆ ಸಹಾಬಿಯರ ಗುಣವನ್ನು ಉಂಟುಮಾಡಬೇಕು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದಾರೆ.

ಈ ಮಾದರಿಯ ಪ್ರಕಾರ ನಡೆಯುತ್ತಾ ಮಸೀಹ್ ಮೌಊದ್(ಅ)ರ ಕೈಯಲ್ಲಿ ಬೈಅತ್ ಮಾಡಿರುವುದಾದರೆ, ರಸೂಲುಲ್ಲಾಹ್(ಸ)ರ ಕೆಲಸಗಳನ್ನು ಪೂರೈಸಲು ಬಂದಿರುವ ಮಸೀಹ್ ಮೌಊದ್‌ರ ಜಮಾಅತಿನವರು ಸಹಾಬಿಯರ ಗುಣವನ್ನು ಬೆಳೆಸಿಕೊಳ್ಳಬೇಕಾಗುವುದು ಎಂದು ಅವರು ಹೇಳಿದ್ದಾರೆ. ಸಹಾಬಿಯರದ್ದು ಪರಿಶುದ್ಧವಾದ ಜಮಾಅತ್ ಆಗಿತ್ತು. ಅವರ ಪ್ರಶಂಸೆಯಿಂದ ಪವಿತ್ರ ಕುರ್‌ಆನ್ ತುಂಬಿದೆ. ನೀವು ಹಾಗೆ ಆಗಿರುವಿರಾ? ಎಂದು ಹಝ್ರತ್ ಮಸೀಹ್ ಮೌಊದ್(ಅ) ಕೇಳುತ್ತಿದ್ದಾರೆ. ಮಸೀಹ್‌ರೊಂದಿಗೆ ಸಹಾಬಿಯರಂತೆ ಇರುವ ಜನರು ಇರುತ್ತಾರೆ ಎಂದು ಅಲ್ಲಾಹನು ಹೇಳಿದ್ದಾನೆ. ಸಹಾಬಿಯರಾದರೋ ತಮ್ಮ ಸಂಪತ್ತು ಮತ್ತು ತಮ್ಮ ಸ್ವದೇಶವನ್ನು ಸತ್ಯದ ಮಾರ್ಗದಲ್ಲಿ ತ್ಯಾಗ ಮಾಡಿದವರಾಗಿದ್ದರು. ಅವರು ಎಲ್ಲವನ್ನೂ ತೊರೆದರು. ಹಝ್ರತ್ ಅಬೂಬಕರ್ ಸಿದ್ದೀಕ್(ರ)ರ ಘಟನೆಯನ್ನು ನೀವು ಆಗಾಗ್ಗೆ ಕೇಳಿರಬಹುದು. ಒಮ್ಮೆ ದೇವ ಮಾರ್ಗದಲ್ಲಿ ಸಂಪತ್ತನ್ನು ನೀಡಲು ಆದೇಶಿಸಲಾದಾಗ ಅವರು ಮನೆಯ ಎಲ್ಲ ಆಸ್ತಿಯನ್ನು ತಂದರು. ಮನೆಯಲ್ಲಿ ಏನು ಬಿಟ್ಟು ಬಂದಿದ್ದೀರಿ ಎಂದು ರಸೂಲ್ ಕರೀಮ್(ಸ) ಅವರೊಡನೆ ಕೇಳಿದಾಗ, ಅಲ್ಲಾಹನು ಮತ್ತು ಅವನ ರಸೂಲನ್ನು ಮನೆಯಲ್ಲಿ ಬಿಟ್ಟು ಬಂದಿದ್ದೇನೆ ಎಂದು ಅವರು ಹೇಳಿದರು.

ಅವರು ತೋರಿಸಿದ ಆವೇಶ ಇದಾಗಿತ್ತು, ಅದರ ಒಂದು ಉದಾಹರಣೆ ಹಝ್ರತ್ ಅಬೂಬಕರ್ ಸಿದ್ದೀಕ್(ರ)ರ ಜೀವನದಲ್ಲಿ ಕಂಡುಬರುತ್ತದೆ. ಅವರು ದೇವಮಾರ್ಗದಲ್ಲಿ ಹುತಾತ್ಮರಾದರು, ಅವರಿಗೆ ಅದೇ ವಿಧಿಸಲಾಗಿತ್ತು ಎಂದು ಅರ್ಥವಾಡಿಕೊಳ್ಳಬೇಕು. ಅವರು ಹುತಾತ್ಮರಾದರೂ, ರಕ್ತವನ್ನು ಹರಿಸಿದರೂ ಇಲ್ಲದಿದ್ದರೂ ಅವರ ತ್ಯಾಗಗಳು ಅವರಿಗೆ ಶಹಾದತಿನ ಸ್ಥಾನವನ್ನು ನೀಡುತ್ತದೆ, ಹುತಾತ್ಮರ ಸ್ಥಾನವನ್ನು ನೀಡುತ್ತದೆ. ಖಡ್ಗಗಳ ಅಡಿಯಲ್ಲಿ ಸ್ವರ್ಗವಿದೆ ಎಂದು ಹೇಳಲಾಗಿದೆ. ಅವರು ಯಾವಾಗಲೂ ಖಡ್ಗಗಳ ಅಡಿಗೆ ಹೋಗಲು ಸಿದ್ಧರಾಗಿದ್ದರು. ಆದರೆ ನಮಗೆ ಅಂತಹ ಕಠಿಣತೆ ಇಲ್ಲ, ಏಕೆಂದರೆ **'ಯಝಉಲ್ ಹರ್ಬ್'** ಎಂದು ನಮ್ಮ ಬಗ್ಗೆ ಹೇಳಲಾಗಿದೆ. ಅಂದರೆ ಮಹ್ದಿಯ ಸಮಯದಲ್ಲಿ ಧರ್ಮಯುದ್ಧಗಳನ್ನು ಮಾಡಬೇಕಾಗಿಲ್ಲ.

(ಮಲ್‌ಫೂಝಾತ್, ಸಂಪುಟ–1, ಪುಟ–42–43, 1984)

ಆದ್ದರಿಂದ, ಅಲ್ಲಾಹನು ನಮಗೆ ನೀಡಿದ ತ್ಯಾಗದ ಸ್ವಲ್ಪ ಅವಕಾಶದಿಂದ ನಾವು ಪ್ರಯೋಜನ ಪಡೆಯಬೇಕು ಮತ್ತು ಅದಕ್ಕಾಗಿ ಜೀವ, ಸಂಪತ್ತು ಮತ್ತು ಸಮಯವನ್ನು ತ್ಯಾಗ ಮಾಡಲು ನಾವು ಮಾಡಿದ ಪ್ರತಿಜ್ಞೆಯನ್ನು ಪಾಲಿಸಲು ನಾವು ಸಿದ್ಧರಾಗಿರಬೇಕು. ನಾವು ಹಝ್ರತ್ ಮಸೀಹ್ ಮೌಊದ್‌ರನ್ನು ಅತ್ಯಂತ ಹೆಚ್ಚು ಪ್ರೀತಿಸುತ್ತೇವೆ ಎಂದು ಬೈಅತ್ ಪ್ರತಿಜ್ಞೆಯಲ್ಲಿ ಹೇಳಿದ್ದೇವೆ. ಏಕೆಂದರೆ ಅವರು ರಸೂಲುಲ್ಲಾಹ್(ಸ)ರ ಪ್ರತಿನಿಧಿಯಾಗಿದ್ದಾರೆ, ಆದ್ದರಿಂದ ನಾವು ಆ ಪ್ರೀತಿಯನ್ನು ತೋರಿಸಬೇಕು ಮತ್ತು ಅದರ ಪ್ರಕಾರ ಕಾರ್ಯನಿರ್ವಹಿಸಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಜಮಾಅತ್‌ಗೆ ಅನೇಕ ಉಪದೇಶಗಳನ್ನು ನೀಡಿದ್ದಾರೆ. ಅವರು ಹೇಳುತ್ತಾರೆ:

ನನ್ನ ಬೈಅತ್ ಮಾಡಿರುವುದಾದರೆ, ಬೈಅತ್‌ನ ಹಕ್ಕನ್ನು ಪೂರೈಸಲು ನನಗೆ ಇದು ಬೇಕು. ಏನು ಬೇಕು? ಅವರು ಹೇಳುತ್ತಾರೆ: ಪವಿತ್ರ ಖುರ್‌ಆನನ್ನು ಓದಿರಿ, ಆದರೆ ಕಥೆಗಳಂತೆ ಅಲ್ಲ. ಬೈಅತ್ತಿನ ಹಕ್ಕನ್ನು ಪೂರೈಸಬೇಕಾದರೆ ಮೊದಲ ಶರತ್ತು ಏನೆಂದರೆ, ಪವಿತ್ರ ಖುರ್‌ಆನನ್ನು ಓದಬೇಕು, ಆದರೆ ಕಥೆಗಳಂತೆ ಅಲ್ಲ. ಅದನ್ನು ಅರ್ಥಮಾಡಿಕೊಂಡು ಓದಬೇಕು. ಕಳೆದ ಖುತ್ಬದಲ್ಲಿ ಪವಿತ್ರ ಖುರ್‌ಆನ್ ಓದುವುದರತ್ತ ನಾನು ನಿಮ್ಮ ಗಮನವನ್ನು ಸೆಳೆದಿದ್ದೆ. ಹಝ್ರತ್ ಪೈಗಂಬರ್(ಸ)ರ ಉಪದೇಶಗಳನ್ನು ಸಹ ಹೇಳಿದ್ದೆ. ಅದರ ವಿವರಣೆಯಲ್ಲಿ ಒಂದೆಡೆ ಅವರು ಜನರ ಬಗ್ಗೆ ವಿವರಿಸುತ್ತಾ ಹೇಳುತ್ತಾರೆ: ಜನರು ಎಷ್ಟು ಮಧುರವಾಗಿ ಖುರ್‌ಆನ್ ಓದುತ್ತಾರೆ. ಉತ್ತಮವಾಗಿ ಓದುತ್ತಾರೆ. ಆದರೆ ಅದು ಅವರ ಗಂಟಲಿನ ಕೆಳಗೆ ಇಳಿಯುವುದಿಲ್ಲ. ಉತ್ತಮವಾಗಿ ಪಾರಾಯಣ ಮಾಡುತ್ತಾರೆ. ಆದರೆ ಮನವರಿಕೆ ಮಾಡಬೇಕಾದ ಸಂಗತಿಯನ್ನು ಮನವರಿಕೆ ಮಾಡುವುದಿಲ್ಲ. ಉತ್ತಮವಾಗಿ ಓದುತ್ತಾರೆ. ಆದರೆ ಅರ್ಥ ಗೊತ್ತೇ ಇಲ್ಲ. ಅವರು ಗಂಟಲಿನಿಂದ ಉತ್ತಮ ಸ್ವರವನ್ನು ಖಂಡಿತವಾಗಿಯೂ ಹೊರಡಿಸುತ್ತಾರೆ. ಹಝ್ರತ್ ಮೌಊದ್(ಅ) ಹೇಳುತ್ತಾರೆ: ದಿಕ್ರ್ ಅಥವಾ ಸ್ಮರಣಿಕೆ ಎಂಬ ಹೆಸರನ್ನು ಸಹ ಹೊಂದಿರುವ ಪವಿತ್ರ ಖುರ್‌ಆನ್ ಮನುಷ್ಯನೊಳಗೆ ಅಡಗಿರುವ ಮತ್ತು ಮರೆತುಹೋದ ಸತ್ಯಗಳನ್ನು ನೆನಪಿಸಲು ಬಂದಿದೆ. ಅವರು ಗಂಟಲಿನಿಂದ ಉತ್ತಮ ಧ್ವನಿಗಳನ್ನು ಹೊರಡಿಸುತ್ತಾರೆ. ಆ ಕಾಲದಲ್ಲಿಯೂ ಈ ಕಾಲದಲ್ಲಿಯೂ ಪವಿತ್ರ ಖುರ್‌ಆನ್ ದಿಕ್ರ್ ಆಗಿದೆ. ಈ ಕಾಲದಲ್ಲೂ ಅದನ್ನು ಕಲಿಸಲು ಆಕಾಶದಿಂದ ಒಬ್ಬ ಶಿಕ್ಷಕ ಬಂದಿದ್ದಾನೆ. **ವ ಆಖರೀನ ಮಿನ್‌ಹುಮ್** ಎಂಬ ಪವಿತ್ರ ಖುರ್‌ಆನಿನ ಭವಿಷ್ಯವಾಣಿಯ ಈಡೇರಿಕೆ ಇಂದು ಆಗಿದೆ. ಆ ವ್ಯಕ್ತಿಯೇ ನಿಮ್ಮ ಮುಂದೆ ಮಾತನಾಡುತ್ತಿದ್ದಾನೆ.

ರಸೂಲ್ ಕರೀಮ್(ಸ)ರ ಭವಿಷ್ಯವಾಣಿಗಳ ಬಗ್ಗೆ ನಾವು ನೋಡೋಣ. ಅವರು ಈ ಕಾಲಘಟ್ಟದ ಬಗ್ಗೆ ಹೀಗೆ ಭವಿಷ್ಯ ನುಡಿದಿದ್ದರು. ಜನರು ಕುರ್‌ಆನ್ ಓದುವರು ಆದರೆ ಅದು ಅವರ ಗಂಟಲಿನ ಕೆಳಗೆ ಇಳಿಯಲಾರದು.

**(ಮುಂದುವರಿಯುವುದು)**

## ಅಹ್ಮದಿ ವಿದ್ಯಾರ್ಥಿಗಳು ಗಮನಹರಿಸಬೇಕು (ಜಾಮಿಯ ಅಹ್ಮದಿಯಾ ಖಾದಿಯಾನ್‌ನಲ್ಲಿ ಪ್ರವೇಶ)

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿರುವ ಪವಿತ್ರ ಸಂಸ್ಥೆಯಾಗಿದ್ದು, ಅಲ್ಲಿ ನೂರಾರು ವಿದ್ವಾಂಸರು ಮತ್ತು ಮುಬಲ್ಲಿಗೀನರು (ಬೋಧಕರು) ಪದವಿ ಪಡೆದಿದ್ದಾರೆ ಮತ್ತು ಇಸ್ಲಾಂ ಧರ್ಮದ ನಿಜವಾದ ಬೋಧನೆಗಳನ್ನು ಪ್ರಪಂಚದ ಮೂಲೆಗಳಿಗೆ ಹರಡುವ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ಸಂಸ್ಥೆಯಿಂದ ಶಿಕ್ಷಣವನ್ನು ಪಡೆಯುವ ಮೂಲಕ ಸರಣಿಯ ಸೇವೆಯತ್ತ ಅಹ್ಮದಿ ವಿದ್ಯಾರ್ಥಿಗಳ ಗಮನವನ್ನು ಹಲವಾರು ಸಂದರ್ಭಗಳಲ್ಲಿ ಸೆಳೆದಿದ್ದಾರೆ. ಆದ್ದರಿಂದ, ಹುಝೂರ್ ಅನ್ವರ್(ಅತಬಿಅ) ಅವರ ಸೂಚನೆಗಳ ಬೆಳಕಿನಲ್ಲಿ, ಹೆಚ್ಚು ಹೆಚ್ಚು ವಾಖಿಫೀನೆ ನೌ ಹಾಗೂ ವಾಖಿಫೀನ್ ಅಲ್ಲದ ಹೊಸ ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶವನ್ನು ಪಡೆದು ಧಾರ್ಮಿಕ ಶಿಕ್ಷಣವನ್ನು ಪಡೆದುಕೊಂಡು ಸರಣಿಯ (ಜಮಾಅತ್ತಿನ) ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು.

ಜಾಮಿಯಾ ಅಹ್ಮದಿಯಾದಲ್ಲಿ 2025–2026ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪ್ರಕ್ರಿಯೆಯು ಏಪ್ರಿಲ್ 2025 ರಿಂದ ಪ್ರಾರಂಭವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಜಾಮಿಯಾ ಅಹ್ಮದೀಯಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುತ್ತಿದೆ. ಆದ್ದರಿಂದ, ಜಾಮಿಯಾ ಅಹ್ಮದಿಯಕ್ಕೆ ಸೇರಲು ಬಯಸುವ ವಿದ್ಯಾರ್ಥಿಗಳು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್) ಅನ್ನು ಸಂಪರ್ಕಿಸಿ ಹಾಗೂ ಸಾಧ್ಯವಾದಷ್ಟು ಬೇಗ ಜಾಮಿಯಾ ಅಹ್ಮದಿಯಾ ಪ್ರವೇಶ ಪತ್ರವನ್ನು ಭರ್ತಿ ಮಾಡಿ ಅದನ್ನು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಕಚೇರಿಗೆ E-mail ಅಥವಾ ಪೋಷ್ಟ್ ಮೂಲಕ ಕಳುಹಿಸಬೇಕು. ಪ್ರವೇಶದ ಷರತ್ತುಗಳಿಗಾಗಿ ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಇಲಾಖೆಯನ್ನು ಸಂಪರ್ಕಿಸಬಹುದು.

**(ಸದರ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ)**

**'ಬದರ್' ವಾರಪತ್ರಿಕೆಯನ್ನು Online**
**ಮುಖಾಂತರ**
**ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.06, Thursday, 29 May 2025, Issue No. 22

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

*(ಪುಟ ಸಂಖ್ಯೆ 07ರ ಉಳಿದ ಭಾಗ)*

ಕಠಿಣವಾಗಿದ್ದರೆ, ಅದನ್ನು ಮೃದುಗೊಳಿಸುವ ಮಾರ್ಗವೆಂದರೆ ಪವಿತ್ರ ಖುರ್‌ಆನನ್ನು ಪದೇ ಪದೇ ಓದುವುದು. ಎಲ್ಲೆಲ್ಲ ದುಆದ ಪ್ರಸ್ತಾಪ ಇರುತ್ತದೆಯೋ ಅಲ್ಲಿ ಸತ್ಯವಿಶ್ವಾಸಿಯ ಹೃದಯವು ಸಹ ಅದೇ ದೈವಿಕ ಕರುಣೆಯು ತನ್ನ ಮೇಲೆ ವರ್ಷಿಸಬೇಕೆಂದು ಬಯಸುತ್ತದೆ. ಪವಿತ್ರ ಖುರ್‌ಆನ್ ಒಂದು ತೋಟದಂತಿದೆ, ಒಂದು ಸ್ಥಳದಿಂದ ವ್ಯಕ್ತಿಯು ಒಂದು ರೀತಿಯ ಹೂವನ್ನು ಆರಿಸುತ್ತಾನೆ, ನಂತರ ಮುಂದೆ ಸಾಗುತ್ತಾ ಇನ್ನೊಂದು ರೀತಿಯ ಹೂವನ್ನು ಆರಿಸುತ್ತಾನೆ. ಆದ್ದರಿಂದ, ಪ್ರತಿಯೊಂದು ಸ್ಥಳಕ್ಕೆ ಅನುಗುಣವಾಗಿ ಪ್ರಯೋಜನವನ್ನು ಪಡೆಯಬೇಕು.

ನಿಮ್ಮ ಸ್ವಂತವಾಗಿ ಏನನ್ನಾದರೂ ಸೇರಿಸುವ ಅಗತ್ಯವೇನು? ಹಾಗಾದರೆ ನೀವು ಹೊಸ ವಿಷಯವನ್ನು ಏಕೆ ಸೇರಿಸಿದ್ದೀರಿ ಎಂಬ ಪ್ರಶ್ನೆ ಉದ್ಭವಿಸುವುದು. ಪವಿತ್ರ ಖುರ್‌ಆನಿನ ಆಜ್ಞೆಗಳನ್ನು ಪಾಲಿಸಿರಿ, ಹೊಸ ಹೊಸ ಆಚಾರಗಳನ್ನು ಸೇರಿಸಬೇಡಿ. ಪವಿತ್ರ ಖುರ್‌ಆನಿನ ಆಜ್ಞೆಗಳೊಂದಿಗೆ ಹೊಸ ಹೊಸ ಮಾತುಗಳನ್ನು ಸೇರಿಸಬೇಡಿ. ರಾತ್ರಿ ಸೂರ ಯಾಸೀನನ್ನು ಓದಿದರೆ ಅನುಗ್ರಹ ಲಭಿಸುವುದು ಇಲ್ಲದಿದ್ದರೆ ಸಿಗುವುದಿಲ್ಲ ಎಂದು ಹೇಳುವ ಅಧಿಕಾರ ಅಲ್ಲಾಹನ ಹೊರತು ಬೇರೆ ಯಾರಿಗಾದರೂ ಇದೆಯೇ?

(ಮಲ್‌ಫೂಝ಼ಾತ್, ಸಂಪುಟ-6, ಪಉಟ-266, 1984)

ಒಂದು ನಿರ್ದಿಷ್ಟ ಸೂರತನ್ನು ಈ ರೀತಿ ಓದಿದರೆ ಅನುಗ್ರಹ ಲಭಿಸುತ್ತದೆ, ಒಂದು ನಿರ್ದಿಷ್ಟ ಸಮಯದಲ್ಲಿ ಓದಿದರೆ ಅನುಗ್ರಹ ಲಭಿಸುವುದು. ಇಲ್ಲದಿದ್ದರೆ ಸಿಗುವುದಿಲ್ಲ ಎಂದು ಕೆಲವರು ಹೇಳುತ್ತಾರೆ. ಈ ಎಲ್ಲ ಸಂಗತಿಗಳು ತಪ್ಪು ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ್ದಾರೆ. ಪವಿತ್ರ ಖುರ್‌ಆನ್ ಅಲ್ಲಾಹನ ವಚನವಾಗಿದೆ. ಅದನ್ನು ಹೇಗೆ ಓದಿದರೂ, ಅರ್ಥಮಾಡಿಕೊಂಡು ಓದಿದರೆ, ಅದನ್ನು ಪಾಲಿಸಲು ಓದಿದರೆ, ಒಳ್ಳೆಯ ಉದ್ದೇಶದಿಂದ ಓದಿದರೆ, ಅನುಗ್ರಹ ಲಭಿಸುವುದು.

ಆದ್ದರಿಂದ ನಾವು ಈ ರೀತಿ ಓದುತ್ತಿದ್ದೇವೆಯೇ ಎಂದು ಪರಿಶೀಲಿಸಬೇಕು. ನಾವು ಎಷ್ಟು ಆಜ್ಞೆಗಳನ್ನು ಕಾರ್ಯಗತಗೊಳಿಸುತ್ತಿದ್ದೇವೆ, ಎಷ್ಟು ದುಆಗಳಿವೆ, ಪವಿತ್ರ ಖುರ್‌ಆನಿನಲ್ಲಿ ದುಆಗಳು ಬರುವಾಗ, ನಾವು ಅವುಗಳನ್ನು ನಮಗಾಗಿ ಬೇಡಲು ಪ್ರಯತ್ನಿಸುತ್ತೇವೆಯೇ? ಎಷ್ಟು ಕೆಡುಕುಗಳಿವೆ, ಅವುಗಳಿಂದ ದೂರವಿರಲು ಆಜ್ಞೆ ಬಂದಾಗ ಅಥವಾ ಉಲ್ಲೇಖ ಬಂದಾಗ, ನಾವು ಅವುಗಳಿಂದ ದೂರವಿರಲು ಪ್ರಾರ್ಥಿಸುತ್ತೇವೆಯೇ ಎಂದು ನೋಡಬೇಕು. ನಾವು ಈ ರೀತಿ ಮಾಡುವುದಾದರೆ, ನಾವು ಪವಿತ್ರ ಖುರ್‌ಆನಿನ ನಿಜವಾದ ಬೋಧನೆಗಳಿಂದ ಪ್ರಯೋಜನ ಪಡೆಯುವೆವು.

ಹಝ್ರತ್ ಮಸೀಹ್ ಮೌಊದ್(ಅ) ಒಂದೆಡೆ ಹೇಳುತ್ತಾರೆ: ನಾನು ಪದೇ ಪದೇ ಹೇಳುತ್ತೇನೆ ಮತ್ತು ಉಚ್ಚ ಧ್ವನಿಯಲ್ಲಿ ಹೇಳುತ್ತೇನೆ, ಪವಿತ್ರ ಖುರ್‌ಆನ್ ಮತ್ತು ಈ ಪ್ರವಾದಿ, ಎಂದರೆ ರಸೂಲ್ ಕರೀಮ್(ಸ)ರೊಂದಿಗೆ ನಿಜವಾದ ಪ್ರೀತಿಯನ್ನು ಹೊಂದುವುದು ಮತ್ತು ನಿಜವಾದ ವಿಧೇಯತೆಯನ್ನು ಅಳವಡಿಸಿಕೊಳ್ಳುವುದು ಮಾನವನನ್ನು ಕರಾಮತ್‌ಗಳನ್ನು (ಅದ್ಭುತಗಳನ್ನು) ಹೊಂದಿರುವವನನ್ನಾಗಿ ಮಾಡುತ್ತದೆ. (ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ-11, ಪುಟ-345)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನಿನ ಬಗ್ಗೆ ಆಳವಾಗಿ ಯೋಚಿಸಿರಿ. ಅದರಲ್ಲಿ ಎಲ್ಲವೂ ಇದೆ, ಒಳ್ಳೆಯದು ಮತ್ತು ಕೆಟ್ಟದ್ದರ ವಿವರಗಳು ಮತ್ತು ಮುಂದಿನ ಕಾಲದ ಮಾಹಿತಿಗಳು ಇವೆ. ಇದು ಯಾವುದೇ ಆಕ್ಷೇಪಣೆಗಳನ್ನು ಹೊಂದಿರದ ಧರ್ಮವನ್ನು ಪ್ರಸ್ತುತಪಡಿಸುತ್ತದೆ ಎಂದು ಚೆನ್ನಾಗಿ ಅರ್ಥಮಾಡಿಕೊಳ್ಳಿ, ಏಕೆಂದರೆ ಅದರ ಅನುಗ್ರಹಗಳು ಮತ್ತು ಫಲಗಳು ನಿರಂತರವಾಗಿ ಸಿಗುತ್ತವೆ. ಅಲ್ಲಾಹನು ಪ್ರತಿಯೊಂದು ರೋಗದ ಚಿಕಿತ್ಸೆಯನ್ನು ಅದರಲ್ಲಿ ತಿಳಿಸಿದ್ದಾನೆ ಮತ್ತು ಎಲ್ಲ ಸಾಮರ್ಥ್ಯಗಳನ್ನು ತರಬೇತಿಗೊಳಿಸಿದ್ದಾನೆ. ಅದರಲ್ಲಿ ಪ್ರಸ್ತಾಪಿಸಲಾಗಿರುವ ಕೆಡುಕಿನಿಂದ ದೂರವಿರಲು ಇರುವ ವಿಧಾನವನ್ನು ಸಹ ತಿಳಿಸಿದ್ದಾನೆ ಎಂಬುದು ಪವಿತ್ರ ಖುರ್‌ಆನಿನ ಮಾತ್ರ ಶ್ರೇಷ್ಠತೆಯಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಆದ್ದರಿಂದ, ಪವಿತ್ರ ಖುರ್‌ಆನನ್ನು ಪಾರಾಯಣ ಮಾಡುತ್ತಿರಬೇಕು ಮತ್ತು ದುಆ ಮಾಡುತ್ತಿರಬೇಕು ಹಾಗೂ ನಿಮ್ಮ ನಡವಳಿಕೆಯನ್ನು ಅದರ ಬೋಧನೆಗಳಿಗೆ ಅನುಗುಣವಾಗಿ ಇರಿಸಿಕೊಳ್ಳಲು ಪ್ರಯತ್ನಿಸಬೇಕು. ಪವಿತ್ರ ಖುರ್‌ಆನ್ ಓದುವುದರತ್ತ ಗಮನ ಸೆಳೆಯುತ್ತಾ, ಹಝ್ರತ್ ಮಸೀಹ್ ಮೌಊದ್(ಅ):

ಪವಿತ್ರ ಖುರ್‌ಆನನ್ನು ಓದಿ ಮತ್ತು ದೇವನ ಬಗ್ಗೆ ಎಂದಿಗೂ ನಿರಾಶರಾಗಬೇಡಿ. ಸತ್ಯವಿಶ್ವಾಸಿಯೂ ಅಲ್ಲಾಹನ ಕುರಿತು ಎಂದಿಗೂ ನಿರಾಶೆಗೊಳ್ಳುವುದಿಲ್ಲ. ಅಲ್ಲಾಹನಿಗೆ ಸಂಬಂಧಪಟ್ಟು ನಿರಾಶೆಗೊಳ್ಳುವುದು ಸತ್ಯನಿಷೇಧಿಗಳ ಅಭ್ಯಾಸವಾಗಿದೆ. ನಮ್ಮ ದೇವ, ಅಲಿ ಕುಲ್ಲಿ ಶೈಯಿನ್ ಕದೀರ್ ದೇವನಾಗಿದ್ದಾನೆ. ತಾನು ಇಚ್ಛಿಸುವುದನ್ನು ಮಾಡಲು ಸಾಮರ್ಥ್ಯವಿರುವ ಅಲ್ಲಾಹನಾಗಿದ್ದಾನೆ. ಪವಿತ್ರ ಖುರ್‌ಆನಿನ ಅನುವಾದವನ್ನು ಸಹ ಓದಿ ಮತ್ತು ಅದರ ದುಆಗಳನ್ನು ನಿಧಾನವಾಗಿ ಮಾಡಿರಿ ಮತ್ತು ಅದರ ಅರ್ಥವನ್ನು ಸಹ ತಿಳಿದುಕೊಳ್ಳಿ ಮತ್ತು ನಿಮ್ಮ ಸ್ವಂತ ಭಾಷೆಯಲ್ಲಿಯೂ ಪ್ರಾರ್ಥನೆಗಳನ್ನು ಮಾಡಿ. ಪವಿತ್ರ ಖುರ್‌ಆನನ್ನು ಒಂದು ಸಾಮಾನ್ಯ ಪುಸ್ತಕವೆಂದು ಭಾವಿಸಿಕೊಂಡು ಓದಬೇಡಿ. ಅದನ್ನು ಅಲ್ಲಾಹನ ವಚನವೆಂದು ಮನವರಿಕೆ ಮಾಡಿಕೊಂಡು ಓದಬೇಕು. (ಮಲ್‌ಫೂಝಾತ್, ಸಂಪುಟ-3, ಪುಟ-57-58, 2022)

ಆದ್ದರಿಂದ ಇವು ಸತ್ಯವಿಶ್ವಾಸಿ ಪಾಲಿಸಬೇಕಾದ ವಿಷಯಗಳಾಗಿವೆ. ನಾವು ಇದನ್ನು ಪಾಲಿಸುವಾಗ, ಅಲ್ಲಾಹನ ಕೃಪೆಯಿಂದ ನಾವು ಪವಿತ್ರ ಖುರ್‌ಆನಿನ ಬೋಧನೆಗಳಿಂದ ಪ್ರಯೋಜನ ಪಡೆಯುವವರಾಗುವೆವು ಮತ್ತು ನಮ್ಮ ಜೀವನವನ್ನು ಸುಂದರಗೊಳಿಸುವವರಾಗುವೆವು. ನಮ್ಮ ತಲೆಮಾರುಗಳನ್ನು ಸುಧಾರಿಸಿಕೊಳ್ಳುವವ ರಾಗುವೆವು. ಹಾಗಾದರೆ, ನಮ್ಮ ಹುಟ್ಟಿನ, ನಮ್ಮ ಜೀವನದ ಉದ್ದೇಶವನ್ನು ನಾವು ಸಾಧಿಸುವವರಾಗುವೆವು. ಮತ್ತು ನಮ್ಮ ಜೀವನವು ಯಶಸ್ವಿಯಾಗುವುದು, ನಮ್ಮ ತಲೆಮಾರುಗಳು ಸಹ ಯಶಸ್ವಿಯಾಗಿ ಸಾಗುವುವು.

ರಮಝಾನ್ ದಿನಗಳಲ್ಲಿ ನಾವು ವಿಶೇಷವಾಗಿ ಪವಿತ್ರ ಖುರ್‌ಆನಿನ ಕಡೆಗೆ ಗಮನ ನೀಡುತ್ತಿರುವುದರ ಜೊತೆಗೆ ನಾವು ಇದನ್ನು ಯಾವಾಗಲೂ ನೆಲೆನಿಲ್ಲಿಸುವೆವು ಮತ್ತು ಅದನ್ನು ಪಾಲಿಸುವುದರ ಕಡೆಗೂ ಗಮನ ನೀಡುವೆವು ಮತ್ತು ನಮ್ಮ ಮಕ್ಕಳಿಗೆ ಸಹ ಪವಿತ್ರ ಖುರ್‌ಆನ್ ಓದಲು ಉಪದೇಶಿಸುವೆವು ಎಂದು ನಾವು ಪ್ರತಿಜ್ಞೆ ಮಾಡಬೇಕು. ಒಂದು ಸಲ ಆಮೀನ್ ಹೇಳಿಸಿ ಮುಗಿಸುವುದಲ್ಲ ಬದಲಾಗಿ, ಪವಿತ್ರ ಖುರ್‌ಆನ್ ನಮಗೆ ಮಾರ್ಗದರ್ಶನದ ದಾರಿಯಾಗುವಂತಹ ಗ್ರಂಥವಾಗಬೇಕು, ಅದು ನಮ್ಮನ್ನು ಯಾವಾಗಲೂ ಸರಿಯಾದ ಮಾರ್ಗದಲ್ಲಿ ಮತ್ತು ದೇವಭಕ್ತಿಯಲ್ಲಿ ನಡೆಸುವಂತಹ ಪರಿಪೂರ್ಣ ಮಾರ್ಗದರ್ಶನವಾಗಿರಬೇಕು. ಹೀಗಾಗುವಾಗ ನಮ್ಮ ಜೀವನವು ಯಾವಾಗಲೂ ಯಶಸ್ವಿಯಾಗುತ್ತದೆ.

ಈ ರಮಝಾನ್‌ನಲ್ಲಿ ನಾವು ಪವಿತ್ರ ಖುರ್‌ಆನನ್ನು ಪಠಿಸುವ ಜೊತೆಗೆ, ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು ಮತ್ತು ಅದನ್ನು ಪಾಲಿಸಲು ಪ್ರತಿಜ್ಞೆ ಮಾಡಬೇಕು. ಮುಂದೆಯೂ ಈ ಪ್ರತಿಜ್ಞೆಯನ್ನು ಪೂರೈಸಲು ಪ್ರಯತ್ನಿಸುತ್ತಿರಬೇಕು ಮತ್ತು ವರ್ಷಪೂರ್ತಿ ಅದನ್ನು ನಮ್ಮ ಜೀವನದ ಭಾಗವಾಗಿ ಮಾಡಿಕೊಳ್ಳಬೇಕು.

**(ಅಲ್‌ಫಝ್ಲ್ ಇಂಟರ್‌ನ್ಯಾಷನಲ್ 04-04-2025, ಪುಟ-2-8)**

-------------*****-------------

***ವಿಶೇಷ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9760468663 (ವ್ಯವಸ್ಥಾಪಕರು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.